ಅಪರಂಜಿ

ಅಕ್ಟೋಬರ್
1995

ತಿಳಿನಗೆಯ ಕಾರಂಜಿ



* ಪ್ರಕಾಶ್
* ಕುಮುದಾ ಪುರುಷೋತ್ತಮ್
* ಶ್ರೀ ಜಿ. ವಿ. ಅರುಣ
* ರಾಧಾ ರಮೇಶ್
* ಪ್ರಭಾ
* ನಂದಿನಿ ಕಾಪಡಿ
* ಅರುಣಾ ಆರ್. ಕಾರಂತ
* ನಾಗೂಶ್ರೀ ಸೂರಿ
* ಶಿವು
* ವಸುಮತಿ ಉಡುಪ

ಬಿಡಿ ಪ್ರತಿ: 2 ರೂ. 50 ಪೈ.

ಸಂಪುಟ ೧೩ ಅಕ್ಟೋಬರ್ ೧೯೯೫ ಸಂಚಿಕೆ ೧

ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ :
2 ರೂ 50 ಪೈಸೆ
ವಾರ್ಷಿಕ ಚಂದಾ
25 ರೂ.

ಆಜೀವ ಚಂದಾ :
250 ರೂ.

ವಿಳಾಸ :
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಿಗ್ಗೆ 8 ರಿಂದ
10 ಗಂಟೆಯವರೆಗೆ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು - 560 003

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೧೩ ಅಕ್ಟೋಬರ್ ೧೯೯೫ ಸಂಚಿಕೆ–೧

ಕಸ್ಮೈದೇವಾಯ ಹವಿಷಾ ವಿಧೇಮ.

–ಋಗ್ವೇದ x-221

ಜಗತ್ಕಾರಣನಾದ ಹಿರಣ್ಯಗರ್ಭನನ್ನು ಕುರಿತ ಮಂತ್ರಗಳ ಕೊನೆಯ ಸಾಲು –ಕಸ್ಮೈ ದೇವಾಯ ಹವಿಷಾ ವಿಧೇಮ ! ಇದರರ್ಥ ಸುಖೈಕ ಸ್ವರೂಪನಾದ ದೇವನಿಗೆ ಹವಿಸ್ಸನ್ನು ಅರ್ಪಣೆ ಮಾಡುತ್ತೇವೆ ಎಂದು.

ಆದರೆ ಇದು ಏನೂ ಅರಿಯದ ಭಾರತೀಯರ ಅರ್ಥ, ಸರ್ವವನ್ನೂ ತಿಳಿದ (ಎಂದರೆ ಎಲ್ಲ ಅಪಾರ್ಥಗಳನ್ನೂ ಎಂದು ತಿಳಿಯ ಬಾರದು) ಪಾಶ್ಚಿಮಾತ್ಯರನ್ನನುಸರಿಸಿ ಯಾವ ದೇವನಿಗೆ ಹವಿಸ್ಸನ್ನು ನೀಡೋಣ ಎಂದು ಭಾರತದ ನಾಯಕರು ಇದರರ್ಥವನ್ನು ಸ್ವೀಕರಿಸಿದರು.

ಹೌದು ಯಾವ ದೇವರಿಗೆ ? ಕಾವೇರಿಯ ನೀರನ್ನು ಕನ್ನಡಿಗರಿಗೋ ತಮಿಳರಿಗೋ ? ತುಂಗೆ ಕೃಷ್ಣೆಯರ ನೀರನ್ನು ತೆಲುಗರಿಗೋ ಕನ್ನಡಿಗರಿಗೋ ? ಪಾಶ್ಚಾತ್ಯ ಬಂಡವಾಳ ಹೈಟೆಕ್ ಉದ್ಯಮಿಗಳಿಂದ ಬರಬೇಕೋ, ಮಾಂಸಾಹಾರಿ ಫಾಸ್ಟ್ ಫುಡ್ ಉದ್ಯಮಿಗಳಿಂದಲೋ ? ಎನ್ರಾನ್ನೊ, ಕೊಜೆಂಟ್ರಿಕ್ಸೋ, ಮಣ್ಣೋ ಮಶಂಟಿಯೋ ?

ಮರಗಳನ್ನು, ಕಲ್ಲನ್ನು ಯಾರಿಗೆ ಕೊಡೋಣ ? ಕಾನೂನು ರಕ್ಷಕರ ಯಶೋಗಾಥೆಯನ್ನು ಹಾಡೋಣವೋ, ಕಳ್ಳ ಕಾಕರದೋ, ಶಾಂತಿಗೋ ಕಚ್ಚಾಟಕ್ಕೋ ನಮ್ಮ ಹವಿಸ್ಸು ?

'ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು ?' ಎಂದು ಬೇಂದ್ರೆಯವರನ್ನು ಕೇಳಿದಳಂತೆ–ತಾಯಿ, ಕನಸಿನಲ್ಲಿ, ಈಗ ಎಷ್ಟು ಜನರ ಬಲಿ ? ಯಾವ ದೇವನಿಗೆ ! ಹಾಗೆ ಅರ್ಥೈಸುವವರಿಗೆ ತಿಳಿಯಲು ಸಾಧ್ಯವೇ ? ಹನ್ನೆರಡು ತುಂಬಿದ ಅಪರಂಜಿ, ಪೆದ್ದು ಪೆದ್ದಾಗಿ ನಗುತ್ತಾ ಶಾಂತಿಃ ಶಾಂತಿಃ ಶಾಂತಿಃ ಎನ್ನುತ್ತಾಳೆ. ಸುಖವೆನ್ನುವುದು ಮತ್ತೆ ಬರಲಿ ಎನ್ನುತ್ತಾಳೆ.



ಪ್ರಕಾಶ್

ತನ್ನೊಡಲಿಗಾಗಿ ಒಡ ಹುಟ್ಟಿದವರು ಹೊಡೆದಾಡುವುದನ್ನು ನೋಡಿ ಕಾವೇರಿ ಕನಲಿ, ಉಕ್ಕಿ ಹರಿದಳಂತೆ ! !

* * * *

ಬೀಜಿಂಗ್‌ನಲ್ಲಿ 50 ಸಾವಿರ ಮಹಿಳೆಯರ ಸಮ್ಮೇಳನ

–ಸುದ್ದಿ

ಅಲ್ಲಿ ಮೈಕ್‌ಗಳು ಅನವಶ್ಯಕ ! !

* * * *

"ಸರಯೇವೋನಲ್ಲಿ ಶಾಂತಿ ಸ್ಥಾಪಿಸಲು ನೇಟೋ ಬಾಂಬ್ ಧಾಳಿ"

–ಪತ್ರಿಕೆ

ಅಪರಂಜಿ ಚಕಿತಳಾದಳಂತೆ !

* * * *

ಮಾವ - ಅಳಿಯರ ಜಗಳದಲ್ಲಿ ಆಂಧ್ರದವರು ಬಡವಾದರು ! !

** ** ** **

ಕಂಡದ್ದನ್ನು ಕಂಡಂತೆ ಅಡಲು ವಿಧಾನ ಸಭಾ ಅಧ್ಯಕ್ಷರ ಸಲಹೆ

-ಸುದ್ದಿ

ನಮಗೆ ಇರೋ ಶತ್ರುಗಳು ಸಾಲದೇನು ? ?

* * * *

ಸಿ. ಓ. ಡಿ. ಧಾಳಿ ; 80 ಲಕ್ಷದ ಗ್ರಾನೈಟ್ ವಶ

–ಪತ್ರಿಕೆ

ಹೌದು, ಯಾವ ಕಲ್ಲನ್ನೂ ತಿರುಗಿಸದೆ ಬಿಡಬಾರದು ! !

* * * *

ವಾಸು ದೇವನ್ ಪ್ರಕರಣ ; ಸದನದಲ್ಲಿ ಕೋಲಾಹಲ

–ಸುದ್ದಿ

"ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ !"

* * * *

ಬೀಜಿಂಗ್ ಮಹಿಳಾ ಸಮ್ಮೇಳನ ; ಭಾರೀ ಬಂದೋ ಬಸ್ತು

–ಪತ್ರಿಕೆ

ಪೋಲೀಸರೆಲ್ಲ ಪುರುಷರೇ ಅಂತೆ ! !

* * *

ಸಮರ್ಪಕ ವಿದ್ಯುತ್ ಪೂರೈಕೆ ಭರವಸೆ

–ಪತ್ರಿಕೆ

ಲೈಟ್ ಇಲ್ಲದೆ ಇದ್ದುದರಿಂದ ಈ ಸುದ್ದಿ ಓದಲು ಆಗಲೇ ಇಲ್ಲ !

* * *

ಚಳುವಳಿ ಮಾಡ್ತಾ ಇರ್ಲಿಲ್ಲ.

ಕುಮುದಾ ಪುರುಷೋತ್ತಮ್

ಕಪ್ಪು ದೇಹದ ದಡಿಯ ಕೋಲು ಹಿಡಿದು ತತ್ತರಿಸುತ್ತಾ ನಡೆಯುತ್ತಿದ್ದ ತಾತನನ್ನು ಹಿಂಬಾಲಿಸುತ್ತಾ ದೊಡ್ಡ ಧ್ವನಿಯಲ್ಲಿ ಗೊಣಗುತ್ತಲೇ ಬರುತ್ತಿದ್ದ. "ನಿಂದೊಳ್ಳೇ ಪಂಚಾಯ್ತಿಯಾಯ್ತು. ನೀನು ಯಾರಮಾತೂ ಕೇಳೋನೇ ಅಲ್ಲ. ನಿನ್ನಂತಹ ಹಟ ಮಾರೀನ ನಮ್ಮ ಲೋಕದ ಚರಿತ್ರೇಲಿ ಕಂಡಿಲ್ಲ. ನಮ್ಮೂರಿಗೆ ಒಮ್ಮೆ ಬಂದ್ಬಿಟ್ರೆ ಅಲ್ಲಿಂದ ತಿರ್ಗಿ ಬರೋಕ್ಕೆ ರೂಲ್ಸಿಲ್ಲ ಅಂತ ನಮ್ಮ ದಣಿ ಎಷ್ಟು ಸರ್ತಿ ಹೇಳಿದ್ರೂ ನಿಂದು ಹಿಡಿದದ್ದೇ ಹಟ ಮಾತಿಗ್ಮುಂಚೆ ಮುನಿಸ್ಕೊಂಡು ಉಪವಾಸ ಮಾಡ್ತೀ ನ್ಯಾಯದೇವತೆ ಅಂತ ಹೆಸ್ರು ತೊಗೊಂಡಿರೋ ನಮ್ಮ ಧಣಿ ಮುಂದೇನೇ ಸತ್ಯಾಗ್ರಹ ಅಂತ ಆಟ ಕಟ್ತೀಯಲ್ಲ ! ನಿನ್ನ ಅವಿವೇಕಕ್ಕೆ ಏನು ಹೇಳೋಣ ? ನೀನೊಬ್ನೇಯಾ ನಿನ್ನ ಜನ್ರನ್ನ ಕಂಡಿರೋದು ? ಒಂದ್ಸಲ, ಒಂದೇ ಒಂದ್ಸಲ ನೋಡಿ ಬಂದ್ಬಿಡ್ತೀನಿ ಅಂತ ಹಟ ಮಾಡಿದೆ. ನಿನ್ನ ಕಾಟ ತಡೀಲಾರ್ದೆ ಸರೀ ಅಂತ ಅಂದಿದ್ದಾರೆ ನಮ್ಮ ಧಣಿ. ಈಗ್ಲೆ ಹೇಳಿದ್ದೀನಿ ಒಂದೇ ಒಂದು ಸಲ ಸಂಚಾರ ಕರ್ಕೊಂಡ್ಹೋಗ್ತೀನಿ ಅಷ್ಟೆ. ಆಮೇಲೆ ತೆಪ್ಪನೆ ನನ್ನ ಹಿಂದೆ ಬರ್ತಾ ಇರ್ಬೇಕು. ನಿಮ್ಮೂರು ಬಂದಕೂಡ್ಲೆ ಎಲ್ಲಾದ್ರೂ ಬಾಲ ಬಿಚ್ತೀ ಅಲ್ಲಿನ ಯಾವ ಆಗು ಹೋಗು ಗಳಲ್ಲೂ ತಲೆ ಹಾಕ್ಬಾರ್ದು ನಿನಗೆ ಬಹಳ ಹುಬಲವಾದ್ರೆ ಒಂದಿಬ್ರುಹತ್ರ ಮಾತ್ನಾಡು, ನಾನು ನೋಡಿಯೂ ನೋಡ್ದಹಂಗೆ ಇದ್ಬಿಡ್ತೀನಿ, ಯಾತಕ್ಕಂದ್ರೆ ಇದೂ ನಮ್ಮ ಕಾನೂನಿಗೆ ವಿರುದ್ಧ. ನಮ್ಮ ಧಣಿಗೇನಾರ ಇದು ತಿಳದ್ರೆ ನಂದೊಂದು ಇನ್‌ಕ್ರಿಮೆಂಟ್ ತಪ್ಪಿಸಿ ಬಿಡ್ತಾರೆ. ಹುಶಾರಾಗಿರು. ನನ್ನ ಇಷ್ಟು ವರ್ಷದ ಸರ್ವೀಸಿನಾಗೆ ನಿನ್ನಂಥಾ ಆಸಾಮೀನ ನೋಡಿರ್ಲಿಲ್ಲ. ಎಲ್ಲಾ ನನ್ನ ಹಣೆ ಬರಹ."

ದಕ್ಷಿಣ ದಿಕ್ಕಿನಲ್ಲಿ ಹೋಗುತ್ತಿದ್ದಾಗ ತಾತ ಕಡಲ ತಟದ ಪ್ರದೇಶ ಒಂದರಲ್ಲಿ ನಿಂತರು, ಆ ಜಾಗ ದೇವೇಂದ್ರನ ಅಮರಾವತಿಗಿಂತ ಹೆಚ್ಚಾಗಿ ಶೋಭಿಸುತ್ತಿತ್ತು. ನಕ್ಷತ್ರಗಳೊಡನೆ ಸ್ಪರ್ಧಿಸುವ ದೀಪಗಳ ಸಾಲು ಸಾಲು, ಅಲ್ಲಲ್ಲಿ ಎದ್ದ ಸುಂದರ ಮಂಟಪಗಳು, ಊರ ಸುತ್ತ ಮುತ್ತಲಿದ್ದ ಬಾಳೆಯ ತೋಟಗಳನ್ನೆಲ್ಲಾ ಧ್ವಂಸಮಾಡಿ ಮೂರುದೂರಕ್ಕೊಂದುರಂತೆ ನೆಟ್ಟ ಬಾಳೆಯ ಕಂಬಗಳು, ಸುಣ್ಣ ಬಣ್ಣ ಬಳಿದು

ಕೊಂಡ ಕಟ್ಟಡಗಳು, ಮಿರ ಮಿರ ಮಿಂಚುವ ಟಾರ್ ರಸ್ತೆ, ಸಾಲಾಗಿ ಲಾಠಿ ಹಿಡಿದು ನಿಂತ ಪೋಲೀಸರು, ಮಧ್ಯೆ ಮಧ್ಯೆ ಬಂದೂಕು ಧಾರಿ ರಕ್ಷಣಾ ಯೋಧರು. ಹಿಂದೊಮ್ಮೆ ಬ್ರಿಟೀಷ್ ಯುವರಾಜ ಭಾರತಕ್ಕೆ ಬಂದಾಗ ಇಂತಹುದೇ ಒಂದು ವಿಜೃಂಭಣೆಯ ದರ್ಬಾರ್ ನಡೆದಿತ್ತಂತೆ. ಒಮ್ಮೆ ಬಿಟ್ಟು ಹೋದ ಬ್ರಿಟೀಷರು ಮತ್ತೊಮ್ಮೆ ಬಂದು ಬಿಟ್ಟಿಲ್ಲವಷ್ಟೇ. ತಾತನ ಹೃದಯ ಬಾಯಿಗೆ ಬಂದಂತಾಯ್ತು.

"ಏನಪ್ಪಾ ನಡೀತಿದೆ ಇಷ್ಟು ವೈಭೋಗದಿಂದ ?" ಲಾಠಿಧಾರಿಯಾದ ಪೋಲಿಸಪ್ಪನನ್ನು ಕೇಳಿದರು

"ನೀನೇನು ಊರಿಗೆ ಹೊಸಬ್ನಾ ಅಥ್ವಾ ಏನೂ ತಿಳೀದ ಹಳ್ಳಿಗಮಾರ್ನಾ ? ಇವತ್ತು ರಾಜಕುಮಾರಂಗೆ ಮದ್ವೆ, ವರನ ಮೆರವಣಿಗೆ ಇನ್ನು ಸ್ವಲ್ಪ ಹೊತ್ನಲ್ಲಿ ಬರೋದಿದೆ"

ರಾಜಕುಮಾರ ! ತನಗೆ ನೆನಪಿರುವಂತೆ ಆಕಾಲದಲ್ಲೇ ರಾಜರುಗಳು ತಮ್ಮ ತಮ್ಮ ರಾಜ್ಯ ಬಿಟ್ಟುಕೊಟ್ಟು ಸಾಮಾನ್ಯ ಪ್ರಜೆಗಳಾಗಿ ಬಿಟ್ಟಿದ್ದರು. ಮತ್ತೆಲ್ಲಿಯ ರಾಜಕುಮಾರ ? ಅಥವಾ ತಾನು ಶಂಕಿಸಿದ್ದಂತೆ ಮತ್ತೊಮ್ಮೆ ಬ್ರಿಟೀಷರ ಆಳ್ವಿಕೆ ಬಂದು ಅಲ್ಲಿಯ ರಾಜಕುಮಾರನ ವಿವಾಹ ಇಲ್ಲಿ ? !.......ತನ್ನ ಸಂದೇಹವನ್ನು ಬಾಯ್ಬಿಟು ಕೇಳಿದರು.

"ಬ್ರಿಟೀಷರೂ ಇಲ್ಲ ಯಾರೂ ಇಲ್ಲ ತಾತಯ್ಯ. ಈಗೆಲ್ಲಾ ನಮ್ಮವ್ರೆ ಅವ್ರನ್ನೂ ಮೀರ್ಸಿ ಲೂಟಿ ಹೊಡೀತವ್ರೆ. ನಿನ್ನ ಕಾಲ್ದಾಗೆ ರಾಜ್ಯಕ್ಕೊಬ್ಬ ದೊರೆ ಇದ್ದ. ಈಗ ರಾಜ್ಯಕ್ಕೆ ಹಲವಾರು ದೊರೆಗ್ಳು, ಇವತ್ತು ನಮ್ಮ ರಾಜ್ಯದ ಮುಖ್ಯ ಮಂತ್ರಿ ಮಗನ್ಮದ್ವೆ"

"ಈ ನಾಡಿನಲ್ಲಿ ಎಷ್ಟೋ ಮದ್ವೆಗ್ಳು ನಡೆಯುತ್ವೆ ಇದಕ್ಯಾಕಪ್ಪ ಅಷ್ಟೊಂದು ವಿಶೇಷ ?"

"ಮಂತ್ರಿಗ್ಳ ಮಗ ಅನ್ನೋದೇ ವಿಶೇಷ"

"ಇದಕ್ಕಾಗಿ ಇಷ್ಟೊಂದು ದುಂದು ವೆಚ್ಚ, ಸರಕಾರಿ ಸವಲತ್ತುಗಳ ದುರುಪಯೋಗ ತಪ್ಪಲ್ವಾ ?"

"ಲೇ ಮುದ್ಕ, ನೀ ಯಾವ ಕಾಲ್ದಾಗಿದ್ದೀಯು ? ಮೆಲ್ಗೆ ಮಾತ್ನಾಡು, ಯಾರ ಕಿವೀಗಾನಾ ಬಿದ್ರೆ ನಾಲ್ಕು ಒದ್ದು ಲಾಕಪ್‌ಗೆ ಹಾಕಿಬಿಟ್ಟಾರು. ಏನೋ ಪಾಪ ವಯಸ್ಸಾದ ಮುದ್ಕ ಅಂತ ಸುಮ್ಕೆ ಬಿಟ್ಟೇನಿ"

ಅಷ್ಟರಲ್ಲಿ ಹೆಣ್ಣೊಬ್ಬಳ ರೋಧನ ತಾತನ ಕಿವಿಗೆ ಬಿತ್ತು. ತಾತನ ಹೃದಯ ಮೇಣದಂತೆ ಮೃದು. ಆಕೆ ಇದ್ದಲ್ಲಿ ನಡೆದರು. "ನಮ್ಮ ಕಷ್ಟ ಕೇಳೊರು ಯಾರೂ ಇಲ್ಲ ಮುದ್ಕಪ್ಪ, ಅಲ್ಲಿ ಕಾಣ್ತದೆ ನೋಡು ಅಲಂಕಾರ ಮಂಟಪ್ಪ ಅಲ್ಲೇ ನನ್ನ ಉಪ್ಪಿನಂಗಡಿ ಇದದ್ದು. ಅದನ್ನು ಕೆಡವಿ ಇದನ್ನು ಕಟ್ಟಿದ್ದಾರೆ. ಒಂದ್ವಾರ ಯಾಪಾರ ಮಾಡ್ಕೂಡ್ದು ಅಂತ ಅಧಿಕಾರಿಗ್ಳು ಹೇಳಾರೆ. ನಮ್ಗೆ ಹೊಟ್ಟೇಗೆ ಹಾಕೋರು ಯಾರು ? ಆದ ನಷ್ಟಕ್ಕೆ ಯಾರು ಪರಿಹಾರ ಕೊಡ್ತಾರೆ ?" ಆಕೆಯ ಕಣ್ಣೀರೊರೆಸಲು ತಾತ ಕೈ ನೀಡಿದರು. ಜೊತೆಗಿದ್ದ ಸಂಗಡಿಗ ಹಿಂದಕ್ಕೆಳೆದು ಮುಂದೆ ತಳ್ಳಿದ. "ಬರ್‍ತಾ ಅಷ್ಟು ಹೇಳಿದ್ದೀನಿ ಆಗ್ಲೆ ತೆಗೆದು ಬುಟ್ಟಿಲ್ಲ ನಿನ್ನ ಬುದ್ದೀನ, ಯಾರಾದ್ರೂ ನಾಲ್ಕು ಬಾರಿಸಿ ಲಾಕಪ್‌ಗೆ ತಳ್ಳಿದ್ರೆ ನಾನು ನನ್ನ ಧಣೀಗೆ ಏನು ಹೇಳಲಿ ಸುಮ್ನೆ ಮುಂದಕ್ಕೆ ನಡಿ"

ಇಬ್ಬರೂ ಈಗ ಗಾಳಿಗಿಂತ ಹಗುರಾಗಿ ತೇಲಿ ಹೊರಟರು.

ಒಂದು ನಗರದ ಜನಭರಿತ ಮುಖ್ಯ ಬೀದಿ. ಭವ್ಯವಾದ ಉಪಹಾರ ಗೃಹ ಆದರ ಮುಂದೆ ಕೆಲವರು ಉಚ್ಚಕಂಠದಿಂದ ಏನೇನೋ ಕೂಗುತ್ತ ಗಲಾಟೆ ಎಬ್ಬಿಸಿದ್ದರು. ತಾತನಿಗೆ ಕಣ್ಣು, ಕಿವಿ ಎರಡೂ ಈಚೀಚೆಗೆ ಮಂದ. ಸಂಗಾತಿಯು ಮರೆ ಹೊಕ್ಕ. "ಗುಪ್ತಣ್ಣಾ ಕಟ್ಟಡದ ಮುಂದೆ ಏನು ಬರ್ದಿದ್ದಾರೆ ? ಅವ್ರೆಲ್ಲಾ ಯಾಕೆ ಪ್ರತಿಭಟಿಸುತ್ತಿದ್ದಾರೆ ? ಕೇಳಿಸ್ಕೊಂಡು ಹೇಳಪ್ಪಾ"

"ಅದೊಂದು ಕೋಳಿ ಮಾಂಸದ ಅಂಗ್ಡಿತಾತಾ. ಬಹು ರಾಷ್ಟ್ರೀಯ ಸಂಸ್ಥೆಯೊಂದು ಈ ಅಂಗ್ಡೀನ ಇಲ್ಲಿ ತೆಗೆದಿದ್ದಾರೆ. ಅಲ್ಲಿ ನೋಡು ನಿಮ್ಮ ದೇಶದ ಯುವ ಜನತೆ ಹೇಗೆ ಕ್ಯೂ ಕಟ್ಟಿ ನಿಂತು ಹುರಿದ ಮಾಂಸ ತಿಂದು ಚಪ್ಪರಿಸ್ತಾ ಇದ್ದಾರೆ"

ತಾತನಿಗೆ ವಾಕರಿಕೆ ಬರುವಂತಾಯ್ತು. "ಹೊರಗಿನಿಂದ ಪ್ರತಿಭಟಿಸ್ತಾ ಇರೋರು ಮಾಂಸಾಹಾರ ಬಿಟ್ಬಿಡಿ. ಪ್ರಾಣಿ ಹತ್ಯೆ ನಿಲ್ಲಿಸಿ ಅಂತ ಕೂಗ್ತಿರಬೇಕಲ್ಲಾ ?" ತಾತ ಆಸೆ ಇಂದ ಕೇಳಿದರು. ಗುಪ್ತ ಪಕ್ಕೆ ಹಿಡಿದು ನಕ್ಕ. "ಹುಚ್ಚತಾತ ಬಣ್ಣದ ಕನ್ನಡಕ ತೊಟ್ಕೊಂಡವನ್ಗೆ ಜಗತ್ತು ಅದೇ ಬಣ್ಣ ಕಾಣ್ಸುತ್ತಂತೆ ಹಾಗಾಯ್ತು ನಿನ್ನ ಕಥೆ. ಅಲ್ಲಿ ಕೂಗ್ತಾ ಇರೋದು ವಿದೇಶಿ ಕೋಳಿಗ್ಳುಬೇಡ ನಮ್ಮ ದೇಶದ ಕೋಳಿಗ್ಳೇ ಇರ್ಲಿ. ಈಗ ನಿಮ್ಮಂಗ್ಡೀನ ಎತ್ತಂಗ್ಡಿ ಮಾಡ್ತೀನಿ ಅಂತ ಕಿರಚ್ಕೊತಿದ್ದಾರೆ.

"ಒಂದ್ಕಾಲ್ದಲ್ಲಿ ಬುದ್ಧ ಮಹಾವೀರನಿಗೆ ಜನ್ಮಕೊಟ್ಟ ನಾಡು ಇದು......" ತಾತ ಮುಂದು ವರೆಯಲು ಗುಪ್ತ ಬಿಡಲಿಲ್ಲ. "ಸಾಕ್ಸಾಕು ನಿಲ್ಸು ನಿನ್ನ ದೇಶದ ಚರಿತ್ರೆ. ಅದರ ಹಿರಿಮೆಯನ್ನು ನಿನ್ನ ಬಾಯಿಂದ ಚಿಟ್ಟು ಹಿಡಿಸುವಷ್ಟು ಕೇಳಿದ್ದೀನಿ ನೀನು ಒಂದೊಂದು ಜಾಗದಲ್ಲೂ ಇಷ್ಟಿಷ್ಟು ಹೊತ್ತು ಕಳದ್ರೆ ಊರ್ಗೆ ಹೋಗೋದು ಯಾವಾಗ ? ಮುಂದೆ ನಡಿ" ಕೈ ಹಿಡಿದೆಳೆದು ಮುಂದುವರೆದ.

ಮತ್ತೊಂದು ಊರು ತಲಪಿದರು. ಅಲ್ಲಿ ಪಂಚತಾರಾ ಹೋಟಲಿನ ಮುಂಭಾಗದ ಹುಲ್ಲು ಹಾಸಿನಲ್ಲಿ ನಿರ್ಮಿತವಾಗಿದ್ದ ವೇದಿಕೆಯ ಮೇಲೆ ವಯಸ್ಸಾದ ವ್ಯಕ್ತಿಯೊಬ್ಬರು ತನ್ನ ಬೆಂಬಲಿಗರನ್ನುದ್ದೇಶಿಸಿ ಆವೇಶದಿಂದ ಮಾತನಾಡುತ್ತಿದ್ದರು. ಆತನ ಕೈ ಬಾಯಿಯ ಹಾವಭಾವಗಳು ಸಿನಿಮಾ ನಟರ ಅಭಿನಯ ನೆನಪಿಸುತ್ತಿತ್ತು. ತಾತ ಹೋಟಲಿನ ಸ್ವಾಗತ ಕಾರಿಣಿಯನ್ನು ಸಮೀಪಿಸಿದರು. "ಮಗೂ, ಆ ವಯಸಾದವ್ರು ಯಾರಮ್ಮಾ ?" "ಅವ್ರನ್ನ ವಯಸ್ಸಾದವ್ರು ಅಂತೀರಲ್ಲ ತಾತ, ನಿಮ್ಮ ಮುಖ ಕನ್ನಡೀಲಿ ನೋಡ್ಕೊಂಡಿದ್ದಿರಾ ? ನಕ್ಕಳು. ತಾತನೂ ನಕ್ಕರು ಹಲ್ಲಿಲ್ಲದ ಬಚ್ಚು ಬಾಯಲ್ಲಿ "ಅವ್ರು ನಮ್ಮೂರ ಸುಲ್ತಾನರು."

"ಅವ್ರ ಪಕ್ಕದಲ್ಲಿರುವ ಆ ಮಹಿಳೆ ಅವರ ಮಗಳಾ ?" ಆಕೆ, ಅಲ್ಲಿದ್ದ ಮಂದಿ ಪಕ್ಕ ಹಿಡಿದು ನಕ್ಕರು. "ತಾತಯ್ಯ ನಿಂಗೊಂಚೂರು ತಿಳ್ಯೋಲ್ಲಾ. ಯಾವ ಲೋಕದಿಂದ ಬಂದಿದ್ದೀಯ ? ಆಕೆ ಅವ್ರ ಕಿರಿರಾಣಿ ಈಗ ಎಲ್ಲಾ ಆಡಳಿತ ಅವ್ಳ ಕೈಲೇ ವಿಪರೀತ ಅಧಿಕಾರ ನಡಸ್ತಾ ಇದ್ದಾಳೆ ರಾಮಾಯಣದ ಕೈಕೇಯಿಯಂತೆ ಆದ್ರೆ ಇಲ್ಲಿ ಹಿರೀ ಹೆಂಡ್ತಿ ಮಕ್ಳು ರಾಮಲಕ್ಷ್ಮಣರಂತೆ ಪಿತೃವಾಕ್ಯ ಪರಿಪಾಲಕರಲ್ಲ. ಅಳಿಯಂದಿರೊಡನೆ ಸೇರಿ ಬಂಡೆದ್ದು ತಂದೆಯನ್ನು ಅಧಿಕಾರದಿಂದ ತಳ್ಳಿದ್ದಾರೆ. ಅದಕ್ಕೇ ತಂದೆ ತನ್ನ ಬೆಂಬಲಿಗ್ರ ಮುಂದೆ ನಿಂತು ಹೇಗಾದ್ರು ಮತ್ತೆ ಗಾದಿ ಮೇಲೆ ನನ್ನನ್ನು

ಏರ್ಸಿ ಅಂತ ಕೇಳ್ಕೋತಿದ್ದಾರೆ" ತಾತ ಈಗ ನಡುಗಲು ಪ್ರಾರಂಭಿಸಿದರು. ಗುಪ್ತ ಆಸರೆಗೆ ತೋಳುಹಿಡಿದ,

"ಹುಶಾರಾಗಿದ್ದೀಯ ತಾನೇ ? ನಿಂಗೇನಾರ ಆದ್ರೆ ನನ್ನ ಕುತ್ತಿಗೆಗೆ ಬರತ್ತೆ"

"ಹೆದ್ರಬೇಡ ಗುಪ್ತಣ್ಣ ನಂಗೇನೂ ಆಗೊಲ್ಲ. ಗುಂಡನ್ನು ಎದುರಿಸಿದ ಗುಂಡಿಗೆ ಇದು : ಗುಪ್ತನಿಗೆ ನಗರದ ಗಟಾಟೆ, ಜನಜಂಗುಳಿ ಸಾಕಾಗಿತು. ಉತ್ತರದ ಒಂದು ಗ್ರಾಮದ ಬಳಿ ಇಬ್ಬರೂ ಬಂದರು.

ಗ್ರಾಮದ ಕೇಂದ್ರದಲ್ಲಿದ್ದ ದೊಡ್ಡ ಮರದ ಸುತ್ತ ಅಲ್ಲಿಯ ಉದ್ರಿಕ್ತ ಜನತೆ ಸೇರಿ ಗಲಾಟೆ ಎಬ್ಬಿಸಿದ್ದರು. ತಾತ ಗುಂಪಿನ ನಡುವೆ ತೂರಿಕೊಳ್ಳುತ್ತಾ ಮಧ್ಯ ಭಾಗ ತಲುಪಿದರು. ಬಡ ಹೆಂಗಸೊಬ್ಬಳನ್ನು ಎರಡೂ ಕೈಗಳಿಂದ ತೂಗಾಡುವಂತೆ ಮರಕ್ಕೆ ಕಟ್ಟಿದ್ದರು. ಆಕೆಯ ಉಬ್ಬಿದ ಹೊಟ್ಟೆ ಗರ್ಭಿಣಿ ಎಂಬುದನ್ನು ಸ್ಪಷ್ಟ ಪಡಿಸಿತ್ತು. ಊರಿನ ಬಲಿಷ್ಠ ಮುಖ್ಯಸ್ಥರು ಆಕೆಯನ್ನು ಸಿಕ್ಕಾಪಟ್ಟೆ ಥಳಿಸಿ ಮೈಯ್ಯಿಂದ ಹರಿದ ರಕ್ತ ಕೋಡಿಯಾಗಿತ್ತು.

"ಅಪ್ಪಗಳ್ರಾ ಆಹೆಂಗ್ಸನ್ನು ಯಾಕೆ ಹೀಗೆ ಹಿಂಸೆ ಮಾಡ್ತೀರ, ಬಿಟ್ಬಿಡಿ" ತಾತ ಕೂಗಿಕೊಂಡರು,

"ನಿಂಗೆ ಗೊತ್ತಿಲ್ಲ ತಾತಯ್ಯ ಅವ್ಳು ಎಂಥಾವ್ಳು ಅಂತ ಅವ್ಳೊಬ್ಬ ಮಾಟಗಾತಿ ಮಕ್ಳು ಊಟ ಮಾಡೊವಾಗ ಬಂದು ನೋಡಿ ಕಣ್ಣುಹಾಕಿದ್ದಾಳೆ ಲೌಡಿ. ಆವತ್ತು ಬಂದ ಜ್ವರ ಇವತ್ತಿನ್ವಗೂರ್ ಬಿಟಿಲ್ಲ. ಅವ್ಳನ್ನು ಮುಗಿಸಿಬಿಟ್ರೆ ಮಾಟದ ಪ್ರಭಾವ ಹೋಗಿ ಮಕ್ಳು ತಂತಾನೆ ಗುಣ ವಾಗತ್ತೆ" ಚಾವಟಿ ಹಿಡಿದ ದಡಿಯನೊಬ್ಬ ಹೇಳಿದ, ಆಕೆಯನ್ನು ರಕ್ಷಿಸಲು ತಾತ ಮುಂದೆ ನುಗ್ಗಿದರು. ಗುಪ್ತ ತಡೆದೆಳೆದು ದೂರಕರೆದೊಯ್ದು "ಮುದ್ಕಪ್ಪಾ ನಮ್ಮ ಊರ್ನಲ್ರೂ ಇಷ್ಟು ಕ್ರೂರವಾಗಿ ನಡ್ಕೋಳೋದಿಲ್ಲ. ನಿಮ್ಮಲ್ಲಿ ಕಾನೂನು, ರಕ್ಷಣೆ ಇಂತಾದ್ದೂ ಇಲ್ವಾ ?"

"ಕಾನೂನು ರಕ್ಷಕರು ಇದ್ದಾರೆ ಗುಪ್ತಣ್ಣ ಅಲ್ಲಿಗೇ ಹೋಗಿ ದೂರ ಕೊಡೋಣ" ಹಾಳು ಬಡಿಯುತ್ತಿದ್ದ ಪೋಲೀಸ್ ಠಾಣೆಯ ಮುಂದೆ ಇಬ್ಬರು ಪೇದೆಗಳು ಎಲೆಯಾಟ ನಡೆಸಿದ್ದರು. ಪಕ್ಕದಲ್ಲಿ ಒಂದು ಬಾಟಲಿ ಎರಡು ಗ್ಲಾಸುಗಳು, ಜೊತೆಗೆ ಒಂದು ಪ್ಲೇಟು ಪಕೋಡ. ತಾತ ಹೋಗಿ ದೂರು ಕೊಟ್ಟರು.

"ಏ ಮುದ್ಕಪ್ಪ, ನಂಮ್ಗೆಲ್ಲಾ ಅದು ಆಗ್ಲೆಗೊತ್ತು. ಆಯಮ್ಮನ ಗಂಡ ಬೇವಾರ್ಸಿ ನನ್ಮಗ ಬಂದು ಗೋಳಾಡ್ತಾ ಕಾಲು ಒಡಿದು ಉರುಳಾಡ್ದ. ಎರಡು ಮದ್ದು ಹೊರಹಾಕಿದ್ವಿ. ನಾವು ಇದೇ ಹಳ್ಳಾಗೆ ಬಾಳ್ಬೇಕಾದವ್ರು. ಹಳ್ಳಿಯ ಮುಖ್ಯಸ್ಥರ ವಿರೋಧ ಕಟ್ಕೊಳಕ್ಕಾಗ್ತದಾ ?"

"ಸರ್ಕಾರದ ಸಂಬ್ಳ ತೊಗೋತಿದೀರ. ನಾನೊಬ್ಬ ಪ್ರಜೆ ಒಬ್ಬ ಮಹಿಳೆಯ ಮೇಲೆ ದೌರ್ಜನ್ಯ ನಡೀತಿದೆ. ನನ್ನ ದೂರ ದಾಖಲಿಸಿ ಹೋಗಿ ಆಕೇನ ಕಾಪಾದಿ ಅಪರಾಧಿಗಳ್ನ ಹಿಡೀರಿ"

"ಅದ್ಕೆಲ್ಲಾ ಒಂದು ಮೇಲ್ನಿಂದ ಆರ್ಡರ್ ಬರ್ಬೇಕು ಇಲ್ಲ ಯಾರಾದ್ರು ಪಾರ್ಟಿ ಯೋರು ಬರ್ಬೇಕು. ನಿನ್ನಂತಾ ಪರದೇಶಿಗ್ಳು ಕೊಟ್ಟಿದ್ದೆಲ್ಲಾ ದಾಖಲಿಸ್ತಾ ಹೋದ್ರೆ ನಮ್ಮ ಇಲಾಖೆ ಆದ್ರುಲ್ಲೇಮುಳ್ಗಿ ಹೋಗ್ತದೆ. ಸುಂಕೆ ತೊಂದ್ರೆ ಕೊಡ್ಬೇಡ ಹೋಗು" ಪೋಲಿಸರು ಗ್ಲಾಸನ್ನು ಬಾಯಿಗೆತ್ತಿದರು.

ಮುಂದೆ ಹೋಗುತ್ತಿದ್ದ ಗುಪ್ತನನ್ನು ತಾತ ನಿಲ್ಲಿಸಿದರು. "ಒಂದೇ ಒಂದ್ಸಲ ಗೃಹಸಚಿವರನ್ನು ನೋಡಿ ಇಲ್ಲಿ ಆಡಳಿತ ನಡೀತಿರೋ ರೀತಿ ವಿವರಿಸಿ ಬಂದ್ಬಿಡ್ತೀನಿ. ಅಂದೊಂದಕ್ಕೆ ಅವಕಾಶ ಕೊಡಪ್ಪ" ಗುಪ್ತ ಉತ್ತರಿಸದೆ ತಾತನನ್ನು ಹಿಂಬಾಲಿಸಿದ.

ಗೃಹಸಚಿವರ ಭವನದ ಮುಂದೆ ರಕ್ಷಣಾ ದಳದವ ಬೀಡಿ ಎಳೆಯುತ್ತಾ ಕುಳಿತಿದ್ದ. "ಏ ತಾತ, ಒಳ್ಗೆ ಬಿಡೋದಿಲ್ಲ. ಸಚಿವರು ಊರ್ನಲ್ಲಿಲ್ಲ"

"ಯಾವಾಗ ಬರ್ತಾರೆ, ತಮ್ಮಾ ?

"ಎರ್ಡು ಮೂರು ತಿಂಗ್ಳಾಗ್ಬಹುದು"

"ಎಲ್ಲಿಗಪ್ಪ ಹೋಗಿದ್ದಾರೆ ?"

"ಚಿಕಿತ್ಸೆಗಂತ ಫಾರಿನ್‌ಗೆ ಹೋಗಿದ್ದಾರೆ"

"ಪಾಪ, ಏನು ಖಾಯಿಲೆಯೋ ?"

"ನೆಗಡಿ, ತಲೆ ನೋವು ಅಂತ ಮಾತಾಡ್ಕೋತಾ ಇದ್ರಪ್ಪ. ಆದರ ಟ್ರೀಟ್ ಮೆಂಟಿಗೇಂತಾ ಪರಿವಾರ ಸಮೇತ ಮೂರು ತಿಂಗ್ಳು ವಿದೇಶಕ್ಕೆ ಹೋಗಿದ್ದಾರೆ. ಹೌದು, ಇಷ್ಟೆಲ್ಲಾ ಪ್ರಶ್ನೆಗಳು ಕೇಳ್ತಿದ್ದೀಯಲ್ಲಾ, ನೀನ್ಯಾರು ?" ಕೈಲಿದ್ದ ಎ. ಕೆ 47ನ್ನು ಕುಣಿಸುತ್ತಾ ಕೇಳಿದ, ಅವನ ಸಂದೇಹ ಕಾಣುತ್ತಲೇ ಗುಪ್ತ ತಾತನನ್ನು ಅಲ್ಲಿಂದ ಹೊರಡಿಸಿದ.

ಪಕ್ಕದ ಮನೆಯೇ ಮುಖ್ಯ ಮಂತ್ರಿಗಳ್ದು, ಭವನದ ಮುಂದಿನ ಹುಲ್ಲು ಹಾಸಿನಲ್ಲಿ ಹಾಕಿದ್ದ ಸೋಫಾವಿನಲ್ಲಿ ಮು. ಮಂತ್ರಿಗಳು ಆಸೀನರಾಗಿದ್ದರು. ಅವರ ಮುಂದೆ ಕ್ಯೂ ಕಟ್ಟಿ ನಿಂತ ನೂರಾರು ಗಣ್ಯ ವ್ಯಕ್ತಿಗಳು, ಒಬ್ಬೊಬ್ಬರ ಕೈನಲ್ಲೂ ಹಾರ, ಎರಡೆರಡು ನಿಂಬೇ ಹಣ್ಣು, ಸರದಿಯಂತೆ ಬಂದು ಹಾರ ಹಾಕಿ ಹಣ್ಣನಿತ್ತು ಕಾಲ್ಮುಟ್ಟಿ ನಮಸ್ಕರಿಸಿ ನಡು ಬಗ್ಗಿಸಿ ಕಿವಿಯಲ್ಲೇನೋ ಉಸುರಿ ಮುಂದೆ ನಡೆಯುತ್ತಿದ್ದರು ಇವರೆಲ್ಲಾ ಯಾರು ? ವೀಡಿಯೋ ಕ್ಯಾಮರಾವಿನಲ್ಲಿ ದೃಶ್ಯ ಸೆರೆ ಹಿಡಿಯುತ್ತಿದ್ದವನನ್ನು ತಾತ ಕೇಳಿದರು. "ಇವರೆಲ್ಲಾ ರಾಜ್ಯ ಸರ್ಕಾರದ ಐ.ಎ.ಎಸ್, ಐ.ಪಿ.ಎಸ್, ಮತ್ತು ಇತರೇ ಉಚ್ಚ ಅಧಿಕಾರಿಗಳು, ಮುಖ್ಯ ಮಂತ್ರಿಗಳು ಹೊಸದಾಗಿ ಪದವಿಗೆ ಬಂದಿದ್ದಾರೆ, ಆದಕ್ಕೇ ಇವರೆಲ್ಲಾ ಗೌರವ ಸೂಚಿಸಿ ತಮ್ಮ ನಿಷ್ಠೆ ತೋರಿಸಿ ಕೊಳ್ಳುತ್ತಾ ಇದ್ದಾರೆ."

ತಾತ ಮುಂದೆ ಮುಂದೆ ನಡೆಯುತ್ತಾ ತಮ್ಮಲ್ಲೇ ವಟ ಗುಟ್ಟಿ ಕೊಂಡರು, 'ಒಂದು ಕಾಲದಲ್ಲಿ ಸಿಂಹದ ಮರಿಗಳಾಗಿದ್ದವ್ರು ಈಗ ಕುರಿಗಳಾಗಿ ಬಿಟ್ಟಿದ್ದಾರೆ, ದೇವ್ರೇ, ಇನ್ನೂ ಮುಂದುವರದು ನನ್ನ ಜನ ಇಲಿಗಳಾಗಿ ಬಿಡದಿರ್ಲೀ'. ಮುಂದೆ ನಡೆದು ಪಾರ್ಕಿನ ನಡುವೆ ಇದ್ದ ಪ್ರತಿಮೆಯ ಪೀಠದ ಬಳಿ ತಾತ ಕುಳಿತರು. "ಅದೇನು ವಟವಟ ಅಂತಿದ್ದೀ ತಾತ, ನನ್ಗೂ ಹೇಳು ಕೇಳೋಣ" ಗುಪ್ತ ಪಕ್ಕ ಕುಳಿತು ಕೇಳಿದ. ತಾತ ಅದರ ಪರಿವೆಯೇ ಇಲ್ಲದೆ ಸ್ವಗತ ನಡೆಸಿದ್ದರು, 'ಹೀಗಾಗುತ್ತೆ ಅಂತ ಮೊದ್ಲೇ ಗೊತ್ತಿದ್ರೆ ಚಳುವಳಿ ಮಾಡ್ತಾನೇ ಇರ್ಲಿಲ್ಲ, ಏನೇನೋ ಕನಸುಗಳು ಕಂಡು ಚಳುವಳಿ ನಡೆಸಿ ಸಂಕೋಲೆ ಕಳಚುವಂತೆ ಮಾಡಿ ಬಲು ದೊಡ್ಡ ತಪ್ಪು ಮಾಡ್ಬಿಟ್ಟೆ." ತಾತನ ಧ್ವನಿ ಗದ್ಗದವಾಗಿ ಕಣ್ಣೀರು ಕೆನ್ನೆಯ ಮೇಲೆ ಹರಿಯಿತು.

"ಗುಪ್ತಣ್ಣ, ನನಗೊಂದು ಉಪ್ಕಾರ ಮಾಡ್ತೀಯ ?"

ತಾತನ ಮನಃಸ್ಥಿತಿ ಕಂಡು ಗುಪ್ತನಿಗೂ ಕಸಿವಿಸಿ. "ಏನು ಹೇಳು ತಾತಯ್ಯ ಇಷ್ಟೆಲ್ಲಾ ಮಾಡ್ದೋನು ಅದೊಂದು ಮಾಡಲಾರೆನಾ, ಹೇಳು ?"

"ವಾಂಛಲ್ಯಕ್ಕೆ ಕಟ್ಟು ಬಿದ್ದು ನಾನು ಇನ್ನೊಂದ್ಸಲ ಇಲ್ಲಿಗ ಬರರ್ಬೇಕು ಅಂತ ಹಟ ಹಿಡದ್ರೆ ಖಂಡಿತಾ ಕರ್ರೊಂಡು ಬರ್ಬೇಡ, ನೀನೆ ಎರಡು ಮಾಡಗಿದ್ರೂ ಸರಿ. ಇಲ್ಲಿಗ್ಮಾತ್ರ ಕರ್ರೊಂಡು ಬರ್ಬೇಡ, ಯಾಕೋ ಈ ಗುಂಡಿಗೆ ಇದನ್ನು ತಡೆಯೋ ಶಕ್ತಿ ಕಳ್ಕೊಂಡು ಬಿಟ್ಟಿದೆ." ತನ್ನ ನಡುಗುತ್ತಿದ್ದ ಕೈ ಮುಗಿದರು, ಗುಪ್ತ ಕೈ ಹಿಡಿದು ತಲೆ ಎತ್ತಿದ.

"ತಾತಯ್ಯ, ಈ ಸೋಜಿಗ ನೋಡಿದ್ಯಾ ? ಈ ಪ್ರತಿಮೆ ನಿನ್ನನ್ನೇ ಹೋಲುತ್ತೆ, ಮೇಲೆ ಕತ್ತೆತ್ತಿ ನೋಡು."

ತಾತ ಬದಲು ಹೇಳದೆ ಬಂದ ದಾರಿಯಲ್ಲಿ ನಡೆದು ಹೋದರು, ಗುಪ್ತ ಹಿಂಬಾಲಿಸಿದ.

ಚೆಂಗನ ಮೊದಲ ಇಂಟರ್‍ವ್ಯೂ

ಶ್ರೀ ಜಿ. ವಿ. ಅರುಣ.

'ನಂಸ್ಕಾರ ಸಾ............

ಚೆಂಗಂದೇ ಧ್ವನಿ......ಬಹಳ ಖುಷಿಯಾಗಿದ್ದ ಮನುಷ್ಯನ ಧ್ವನಿ ಅದಾಗಿತ್ತು. ಆ ಧ್ವನಿಯಲ್ಲಿದ್ದ ಖುಷಿಯುಬನಿ ನನ್ನಲ್ಲೂ ಆನಂದದ ಬುಗ್ಗೆಯನ್ನು ಚಿಮ್ಮಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

'ಬಾ ಚೆಂಗ.........ಬಹಳ ಖುಷಿಯಾಗಿರೋ ಹಾಗಿದೆ......?

'ಔದು ಸಾ......ರಿಟನ್ ಟೆಸ್ಟನಾಗೆ ಪಾಸಾಗೋಗದೆ ಸಾ......ಇಂಟರ್‍ವ್ಯೂಗೆ ಏಳಿ ಕಳಸವ್ರೆ......ಇಕಾ... ಇವತ್ತೇ ಐತೆ...ಅಂತ ತನ್ನ ಜೋಬಿನಿಂದ ಮಡಿಚಿಟ್ಟಿದ್ದ ಚೀಟಿ ತೆಗೆದುಕೊಟ್ಟ. ಇಪ್ಪತ್ತು ಮಡಿಕೆಗಳಿದ್ದ ಆ ಚೀಟಿಯನ್ನು ಬಿಡಿಸಿ ನೋಡಿದೆ. ಚೆಂಗ ಹೇಳಿದ್ದಂತೆ ಅಂದೇ ಅವನನ್ನು ಸಂದರ್ಶನಕ್ಕೆ ಹಾಜರಾಗಲು ಕರೆದ ಪತ್ರ ಅದು. ಆ ಮಡಿಚಿದ್ದ ಪತ್ರದ ಸ್ಥಿತಿ ನೋಡಿ ಅದರ ಮೇಲೆ ನನಗೆ ಕನಿಕರ ಬಂತು.

'ಈ ಸುದ್ದಿ ಏನೋ ಸಂತೋಷದ ಸುದ್ದೀನೆ ಚೆಂಗ......ಆದ್ರೆ ಆ ವಿಚಾರ ಹೊತ್ತು ತಂದ ಈ ಪತ್ರಕ್ಕೆ ನಾವು ಕೊಡಬೇಕಾಗಿರೊ ಗೌರವ ತೋರಿಸಲಿಲ್ಲವಲ್ಲ ಚೆಂಗ...'

'ಐ...ಬುಡಿಸಾ...ಇಸ್ಯ ತಿಳಿದ ಮ್ಯಾಕೆ ಅದ್ರಿಂದೇನು ಪ್ರಯೋಜ್ನ......? ಹತ್ತಿದ ಮೇಲೆ ಏಣಿ ಒದ್ಯೋರ ತರಹ ಚೆಂಗ ಹೇಳಿದ.

'ಆದೇ ನೋಡು ನಾನು ಹೇಳಿದು......ಈ ಕೊನೇ ವಾಕ್ಯ ನೋಡು... "...ನಿಮ್ಮೊಡನೆ ಈ ಪತ್ರ ತನ್ನಿ" ಅಂತಿಲ್ವ...

'ಇಲ್ಕೊಡಿ ಆದ್ನ...ಹುಸಾರಾಗಿ ಮಡ್ಕೊತೀನಿ...' ಅಂತ ನನ್ನ ಕೈನಿಂದ ಆ ಸಂದರ್ಶನದ ಕರೆಪತ್ರವನ್ನು ಕಿತ್ತುಕೊಂಡು ಮತ್ತೆ ಮಡಚಿ ತನ್ನ ಜೋಬಿಗೆ ಬಿಟ್ಟ

'ಈಗ ನಾನು ಬಂದ ಮುಕ್ಯವಿಸ್ಯ ಅಂದ್ರೆ ಇಂಟರ್‍ವ್ಯೂನಾಗೆ ಯೇನೇನು ಮಾಡ್ತಾರೆ......ಸಾವೇನೇನು ಮಾಡ್ಬೇಕು...ವಸಿ ತಿಳ್ಕೊಂಡೋಗೋಣಾ ಅಂತ ಬಂದೆ...'

'ಆದಿರ್ಲಿ ನೀನ್ಯಾವಾಗ ಕೆಲ್ಸಕ್ಕೆ ಸೇರ್ಕೊಳ್ಳೊಕ್ಕೆ ಮನಸ್ಸು ಮಾಡ್ದೆ...... "ಫ್ರೀಲಾನ್ಸ್" ಕೆಲ್ಸ ಮಾಡ್ತೀನಿ ಜನರಿಗೆ ಸಹಾಯಾನೂ ಆಗುತ್ತೆ ಹೆಸರೂ ಬರುತ್ತೆ ಆ ಮೇಲೆ ರಾಜಕೀಯಕ್ಕಿಳಿದು ಏನೇನೋ ಆಗ್ಬೋದು ಅಂತಿದ್ದೀಯ...... ಈಗ ರಿಟನ್ ಟೆಸ್ಟು...ಇಂಟರ್ವ್ಯೂ......ಇದೆಲ್ಲ ಏನು ಚೆಂಗ ?" ನನ್ನ ಯಕ್ಷಪ್ರಶ್ನೆ ಯನ್ನು ಚೆಂಗನ ಮುಂದೆ ಇಟ್ಟೆ.

'ಓ ಅದೊಂದೊಡ್ಕತೆ .....ನನ್ನ ಡೇರಕ್ಷನ್ ಬದ್ಲಾಯ್ಸಿಕೊಂಡಿಲ್ಲಾ ಸಾ... ಏನಾರ ಒಂದನ್ನು ಕೆಲ್ಸ ಮಾಡ್ದ್ರೆ ಕೊಂಚ ಅನ್ಭವ ಬತ್ತದೆ. ಸೋಸ್ಯಲ್ ಸರ್ವಿಸ್ ಮಾಡಕ್ಕೂ ಅನ್ಕೂಲ ಆಯ್ತದೆ ಅಂತ ಯೋಚ್ನೆ ಅಷ್ಟೇಯ......ನನ್ನ ಸ್ನೇಹಿತಗೊ ಳೆಲ್ಲಾ ಅಪ್ಲೆ ಮಾಡ್ತಿದ್ರು. ಅವ್ರು ನಂಗೂ ಒಂದು ಫಾರಂ ತಂದು ನನ್ನ ರುಜು ಗೀಚಿಸ್ಕೊಂಡು ಅವ್ರೇ ತುಂಬಿ ಕಳ್ಸಿದ್ರು. ರಿಟನ್ ಟೆಸ್ಟದಿನ ಬೆಳ್ಗೆ ಆಷ್ಟೊತ್ತಿಗೆ ಮನೆಗ್ಬಂದು ನಿದ್ದೆಯಿಂದ ಎಬ್ಸಿ ಬಲವಂತವಾಗಿ ಕರ್ಕೊಂಡೋದ್ರು. ಒಂದೊಂದು ಪ್ರಶ್ನೆಗೆ ನಾಲ್ಕಾಲ್ಕು ಉತ್ತರಗೊಳು. ನಿದ್ದೆ ಕಣ್ಣಲ್ಲೆ ಎಲ್ಲಿ ತೋಚ್ತೊ ಅಲ್ಗೆ ರೈಟ್ ಹಾಕ್ದೆ...ಪ್ರಶ್ನೆ ಓದೋಕ್ಕೂ ಓಗ್ಲಿಲ್ಲ.........ನೋಡಿ ಸಾ...ಅಂಗೇ ಕ್ಲಿಕ್ ಆಗೋಯ್ತು.......ಈಗ ಪಾಸಾಗಿ ಇಂಟರ್ವ್ಯೂ ಬಂದಿರೋದು ನಮ್ಮ ಸ್ನೇಹಿತ್ರಲ್ಲಿ ನಂಗೊಬ್ನಿಗೆ ಮಾತ್ರ......ಮುಖ ಊರಗಲ ಮಾಡಿಕೊಂಡು ಹೇಳಿದ.

ಚೆಂಗ ಮುಗ್ಧನಂತೆ ಇರೋ ವಿಚಾರ ಇದ್ದಹಾಗೆ ಹೇಳೋ ಆಸಾಮಿ ಅಲ್ಲ. ಆದರೆ ನನ್ನೊಬ್ಬನ ಹತ್ರ ಮಾತ್ರ ಯಾಕೋ ಏನೋ ಎಳೆಮಗುವಿನತರಹ ಆಗೋ ಗ್ತಾನೆ. ಈಗಲೂ ಅದೇ ತರಹ. ನಾನು ಮಾತನಾಡುವುದಕ್ಕೆ ಮುಂಚೆಯೇ ಮತ್ತೆ ಅವನೇ ಪ್ರಾರಂಭಿಸಿದ.

'...ನೀವು ರಾಜ್ಕೀಯ ಅಂದ್ರಲ್ಲ ಅದ್ಕೇನಂತೆ ಚೇಗ ಇದ್ಕಡೀಕೆ ರಾಜ್ಕೀಯ ಯಾಕಾಗಬಾರ್ದು...?...ಇರ್ಲಿ ಈಗ ಇರೋ ಇಚಾರಕ್ಕೆ ಬನ್ನಿ...ಅವ್ರು ಕೆಲ್ಸ ಕೊಟ್ರೊ ನಾ ಓಗಾಕಿಲ್ಲ..... ಆದ್ರೆ ನಾನೂ ಒಂದು ರಿಟನ್ ಟೆಸ್ಟಲ್ಲಿ ಪಾಸಾಗಿ ಇಂಟರ್ವ್ಯೂನೂ ಆಗಿ ಸಿಕ್ಕಿದ ಕೆಲ್ಸಾನ "ಬೇಡ" ಅಂದೆ ಅಂದ್ರೆ ನನ್ನ ಪ್ರೆಸ್ಟೀಜು ಎಚ್ಚಾ ಗಕ್ಕಿಲ್ಲವ್ರಾ...ಅದ್ಕೇ ಇದೆಲ್ಲ...ಊಂ...ಇಂಟರ್ವ್ಯೂನಾಗೆ ಏನೇನ್ಮಾಡ್ಬೇಕು ಕೊಂಚ್ ಯೋಳ್ಕೊಡಿ ಸಾ...ಟೇಂ ಆಗೋಯ್ತು..."

'ಅವ್ರು ಇಂಥಾದೇ ಪ್ರಶ್ನೆ ಕೇಳ್ತಾರೆ ಅಂತ ಹೇಳೋದು ಕಷ್ಟ ಚೆಂಗ... ನೀನು ಓದಿರೋ ವಿಷಯಗಳ ಬಗ್ಗೆ ಕೇಳಬಹುದು......

'ಕಾಲೇಜ್ನಾಗೆ ಮಡಗಿದ್ರುಲ್ಲ ಆ ಸಬ್ಜೆಕ್ಟಗೊಳ್ ಮೇಲೆ ಕೇಳಿದ್ರೆ ನಾನೋಡ್ಕೋತಿನಿ ಬಿಡಿ ಸಾ......

ಕ್ಲಾಸಿಗೇ ಬರದ ಚೆಂಗ ಏನು ನೋಡ್ಕೋ ತಾನೋ ನನಗೆ ಗೊತ್ತಾಗಲಿಲ್ಲ. ಅದನ್ನು ತಿಳಿಯಲೂ ನನಗೆ ಆಸೆ ಇರಲಿಲ್ಲ.

'ಕೆಲವು ಸರಿ ನಿನ್ನ ಹವ್ಯಾಸಗಳೇನಪ್ಪ ಅಂತ್ಲೂ ಕೇಳ್ತಾರೆ......'

"ಐ......ಅದ್ನೆಲ್ಲ ಏಳಾಕಾಯ್ತದ......!" ಚೆಂಗ ಪೆಚ್ಚು ನಗೆ ನಕ್ಕ.

'ಅಂಥ ಹವ್ಯಾಸಗಳಲ್ಲಪ್ಪ !......ಏನು ಆಟ ಆಡ್ತಿ...ಬಿಡವಿನ ಹೊತ್ತಿನಲ್ಲಿ ಏನು ಮಾಡ್ತಿ......ನನ್ನ ಮಾತನ್ನು ಅರ್ಧದಲ್ಲೇ ತಡೆದು,

"ಓ......ಆಬೀಸ್ ಅನ್ನಿ......ಸಾ...ದೊಡ್ಡ ದೊಡ್ಡೋರು ಬರ್ದಿರೋ ಪುಸ್ಕಗಳನ್ನ ಓತ್ತೀನಿ ಅಂದ್ರೆ ಮಾರ್ಕ್ಸ ಜಾಸ್ತಿ ಕೊಡ್ತಾರ......?"

'ಹಾಗೇನಿಲ್ಲ...ಆದ್ರೆ ಓದೋದು ಒಳ್ಳೆ ಹಾಬಿ ಅಂದ್ರೆ ಹವ್ಯಾಸ......ಯಾಕೆ ಯಾವ ಯಾವ ಪುಸ್ತಕ ಓದಿದ್ದೀನಿ ಅಂತ ಹೇಳ್ಬೇಕು ಅಂತಿದಿ...?

"ಅದೇ ಸಾ...ಹಾಳಾದ್ದು ಅವ್ನ ಎಸ್ರು ಬೆಳಗಿಂದ ಗ್ನಪ್ತಿಗೆ ಬತ್ತಿಲ್ಲ. ಅದೇ ಇಂಗ್ಲೀಸ್‌ನೋನು...ಅದೆಂತಾದೊ ರೋಡ್ ರೋಮಿಯೊ-ಜೂಲಿ ಸೀಜರ್ ಅಂತ ಕತೆ ಬರ್ದಿದಾನಲ್ಲ ಸಾ......

ನನಗೆ ಬಂದ ನಗು ತಡೆದುಕೊಂಡು......'ಷೇಕ್ಸಪಿಯರ್‌ಏನಪ್ಪ...ಅಂದೆ."
'ಥ್ಯಾಂಕ್ಸ್ ಸಾ...ಅವ್ನೆ...ಹಾಳಾದ್ದುಗ್ನಪ್ತೀಗೆ ಬಂದಿರ್ನಿಲ್ಲ......

"ಅವನು ಬರೆದಿದ್ದು ನಾಟಕಾನಪ್ಪ...ಕತೆ ಅಲ್ಲ...ಆದೂ ರೋಡ್‌ರೋಮಿಯೋ ಅಲ್ಲ...ರೋಮಿಯೊ ಅಂಡ್ ಜೂಲಿಯಟ್...ಜೂಲಿ ಸಿಜರ್ ಅಲ್ಲ... ಜೂಲಿಯಾಸ್ ಸೀಸರ್'

'ಇರ್ಲಿ ಬಿಡಿ ಸಾ...ನಾ ಅಸ್ಟು ಯೋಳಿದ್ರೆ ಉಳಿದದ್ದು ಅವ್ರೇ ಅಡ್ಜಸ್ಟ ಮಾಡ್ಕೊಂಡ್ರಿಡ್ತಾರೆ......ನಂಗೆ ಅಸ್ಟಾದರೂ ಗೊತ್ತಿದ್ಯಲ್ಲ ಸಾ...ಹೆಮ್ಮೆಯಿಂದ ಬೀಗಿದ.

ರೋಡ್ ರೋಮಿಯೋ ಅವನಿಗೆ ಗೊತ್ತಿರಬಹುದಾದರೂ ಈ ಜೂಲಿಯಸ್ ಸೀಸರ್ ಇವನಿಗೆ ಹ್ಯಾಗೆ ಗೊತ್ತು ತಂತ ನನಗೆ ಆಚರ್ಯವಾಗಿತ್ತು...ಕೇಳಿದೆ...

'ಐ ಬಿಡಿ ಸಾ...ನಂ ಸಾವ್ಕಾರನ್ಮನೆಯಾಗೆ ಎಲ್ಡು ನಾಯಿಗಳವೆ. ಎಣ್ಣುನಾಯಿಗೆ ಜೂಲಿ ಅಂತ ಕರಿತಾರೆ...ಗಂಡು ನಾಯಿಗೆ ಸೀಜರ್ ಅಂತ...ಒಂದ್ಕಿತ ಸಾವ್ಕಾರನ್ಮಗಳೇ ಯೋಳಿದ್ಲು...ಜೂಲಿ-ಸೀಜರ್ ಅಂತ ಒಂಟ್ಗೆ ಕರೆದಾಗಲೆಲ್ಲಾ ಶೇಸ್ಕಿಯರ್ ನಾಟ್ಕ ಗ್ನಪ್ತಿಗೆ ಬತ್ತದೆ ಅಂತ......ಅದೇ ನನ್ನ ತಲ್ಯಾಗಯ್ತೆ...

ಇವನು ಜ್ಞಾಪಿಸಿಕೊಳ್ಳಲು ಇಟ್ಟುಕೊಂಡ ಹೋಲಿಕೆಯನ್ನು ಕೇಳಿದ ಮೇಲೆ ನನಗೆ ಷೇಕ್ಸ್‌ಪಿಯರ್‌ಗಿಂತ ಜೂಲಿಯಸ್ ಸೀಸರ್ ಮೇಲೆ ಕರಣೆ ಉಂಟಾಯಿತು.

'ಸಾ...ಇನ್ನು ಕನ್ನಡ ಸಾ ಇತಿಗೊಳ ಇಚಾರ....ಅನ್ನುತ್ತಿದ್ದಂತೆ ನನಗೆ ಹೆದರಿಕೆಯಾಯಿತು.

'ಅದೇಲ್ಲ ಬೇಡ...ಚೆಂಗ...ನಿನಗೆ ಚೆನ್ನಾಗಿ ಗೊತ್ತಿರೋದು ರಾಜಕೀಯ... ಅದನ್ನೇ ಹೇಳುಬೇಕಾದ್ರೆ ರಾಜಕೀಯ ವಿಶ್ಲೇಷಣೆ ಮಾಡ್ತೀನಿ ಅನ್ನು...

'ಔದು ಸಾ...ಅದೇ ಸರಿ...ರಾಜಕೀಯ ವಿಶ್ಲೇಸಣೆ...ಸಖತ್ತಾಗಿದೆ ಎಸ್ರು... ಅವ್ರೇನಾದ್ರ ಕೇಳಿದ್ರೆ ಸೇಸನ್ನು, ರಾವು, ಜಯ್‌ಲಲ್ತ, ಎಲೆಕ್ಸನ್ ಎಲ್ಲಾ ಏಳ್ಬೊದು ಸಾ...ಗ್ನಾಪ್ಸಿದ್ದಕ್ಕೆ ತ್ಯಾಂಕ್ಸ್ ಸಾ...ಒತ್ತಾಯ್ತು ಸಾ...ಬತ್ತೀನಿ...ಆ ಮ್ಯಾಕೆ ಬಂದು ನೋಡ್ತಿನಿ ಸಾ...ಅಂತ ಹೇಳಿ ಜಾಗ ಖಾಲಿ ಮಾಡಿದ.

'ಒಂದು ಕಲಹ ಪ್ರಸಂಗ'

–ರಾಧಾ ರಮೇಶ್

ನನ್ನ ಮತ್ತು ನನ್ನ ಪತ್ನಿಯ ನಡುವಣ ಕಲಹ ಆರಂಭವಾದದ್ದು ಇಪ್ಪತ್ತು ವರುಷಗಳ ಹಿಂದೆ. ನಮ್ಮಿಬ್ಬರ ವಿವಾಹದ ದಿನ, ನಮ್ಮ ನಡುವೆ ಹಿಡಿದಿದ್ದ ಅಂತಃಪಟ ಜಾರಿದ ತಕ್ಷಣ ಜಾರಿಯಾದ ಈ ಕಲಹ (ಆರಂಭದಲ್ಲಿ ಇದನ್ನು ನಾವು ಪ್ರೇಮ ಕಲಹವೆಂದು ಪರಿಗಣಿಸಿದರೂ) ಅನತಿ ಕಾಲದಲ್ಲಿ ಭಯಂಕರ ಸ್ವರೂಪ ಹೊಂದಿ, ಇಪ್ಪತ್ತು ವರುಷಗಳಿಂದ ತೆರಪಿಲ್ಲದೆ, ಅನೂಚಾನವಾಗಿ ಜರುಗುತ್ತಲೇ ಇದೆ; ಕ್ಷಮಿಸಿ. ಜರುಗುತ್ತಲೇ ಇತ್ತು, ಇದೀಗ ನಾವು ಕದನ ವಿರಾಮ ಘೋಷಿಸಿದ್ದನ್ನೂ ಮತ್ತು ನಮ್ಮ ಕದನ ವಿರಾಮ ಘೋಷಣೆಗೆ ತೆರೆಮರೆಯ ಶಕ್ತಿಯಾಗಿ ಕಾರ್ಯಗೈದ ಆಧುನಿಕ ಪರಿಕರವೊಂದರ ಬಗ್ಗೆ ತಿಳಿಸುವುದೇ ಈ ಕಿರು ಲೇಖನದ ಪರಮ ಉದ್ದೇಶ.

ನಮ್ಮ ವಿವಾಹದ ದಿನ, ಅಂತಃಪಟದ ಆಚೆ, ಈಚೆ ಶುದ್ಧ ಅಂತಃಕರಣದಿಂದ ನಿಂತಿದ್ದ ನನ್ನ ಮತ್ತು ನನ್ನ ಭಾವೀ ಪತ್ನಿಯ ಮಧ್ಯೆ ಈ ತೆರೆ ಶಾಶ್ವತವಾಗಿರಲಿ ಎಂಬ ಕೆಟ್ಟ ಧೋರಣೆಯ ಕೆಲವು ಮುತ್ತೈದೆಯರು ನಮ್ಮ ಕಲಹದ ನಾಂದಿಯನ್ನು ಹಾಡಿದರು.

ಅವರಲ್ಲಿ ಕೆಲವರು ನನ್ನ ಬಳಿ ಬಂದು,

'ಅಂತಃಪಟ ಜಾರಿದ ಕೂಡಲೇ ನೀನೇನಾದರೂ ಸ್ವಲ್ಪ ನಿಧಾನ ಮಾಡಿದರೂ, ತಕ್ಕೋ ನಿನ್ನ ಹೆಂಡತಿ, ತಾನೇ ಮೊದಲು ನಿನ್ನ ತಲೆಯ ಮೇಲೆ ಅಕ್ಷತೆ ಹಾಕಿ. ನಿನ್ನ ತಲೆಯನ್ನು ಅರೆಯಲು ಶುರು ಮಾಡುತ್ತಾಳೆ, ಜೀವನದುದ್ದಕ್ಕೂ ಅವಳ ಪರಿಚಾರಕನಾಗಿ ಕಾಲಕಳೆಯ ಬೇಕಾಗುತ್ತದೆ' ಎಂದು ನನ್ನ ಕಿವಿಯಲ್ಲಿ ಕೊರೆಯುತ್ತಿದ್ದರೆ,

ಇನ್ನೂ ಕೆಲವರು ಅವಳ ಪಕ್ಷ ಹಿಡಿದು,

'ಹುಷಾರು ಕಣೇ, ನೀನೇ ಮೊದಲು ಅವನ ತಲೆಯ ಮೇಲೆ ಅಕ್ಷತೆ ಹಾಕಬೇಕು. ಇಲ್ಲದಿದ್ದರೆ ಕೆಟ್ಟೆ.! ಸಾಯುವ ತನಕ ಅವನ ಸೇವೆಯಲ್ಲಿ ಜೀವ ಸವೆಸಬೇಕು' ಎಂದು ಅವಳ ಕಿವಿಯಲ್ಲಿ ಹುಳಿ ಹಿಂಡುತ್ತಿದ್ದರು.

ಈ ಮುತ್ತೈದೆಯರ ದುರದ್ದೇಶದ ಇನಿತೂ ಸುಳಿವಿಲ್ಲದ ನಾವಿಬ್ಬರು, ಅವರು ನಮ್ಮ ಪರಮ ಹಿತೈಷಿಗಳೆಂಬ ಕೇವಲ ನಮ್ಮ ಒಳಿತಿಗಾಗಿ, ತಮ್ಮ ಜೀವನದ ಅನುಭವ ಸುಧಾ ಮೃತವನ್ನು ನಮಗೆ ಎರೆಯುತ್ತಿದ್ದಾರೆಂಬ ತಪ್ಪು ಕಲ್ಪನೆಗಳಿಗೆ

ಬಲಿಯಾಗಿದ್ದೆವು. ಅಂತರಪಟ ಸರಿಯುವ ವೇಳೆಗೆ, ಕರಟಕ ದಮನಕರಿಂದ ಪ್ರೇರೇಪಿಸಲ್ಪಟ್ಟ ಸಂಜೀವಕ, ಪಿಂಗಳಕರ ತರಹ, ಒಬ್ಬರನ್ನೊಬ್ಬರು ಘಾಸಿಗೊಳಿಸಲು ಅನುವಾಗಿದ್ದೆವು. ತೆರೆ ಸರಿದದ್ದೇ ತಡ, ಮುಷ್ಟಿಯಲ್ಲಿದ್ದ ಅಕ್ಷತೆಯನ್ನ್ನು ಬುಲೆಟ್‌ಗಳೋಪಾದಿಯಲ್ಲಿ ರಭಸದಿಂದ ಒಬ್ಬರಿನ್ನೊಬ್ಬರೆಡೆಗೆ ಎಸೆದುಕೊಂಡೆವು.

ನಮ್ಮ ವಿವಾಹದ ಕಾರ್ಯಕ್ರಮವನ್ನು ಸೆರೆ ಹಿಡಿಯಲು ಆಗ ವೀಡಿಯೋದಂತಹ ಉಪಕರಣವಿರಲಿಲ್ಲ. ಅದರ ಕೊರತೆ ಈಗ ನನಗೆ ಮನದಟ್ಟಾಗುತ್ತಿದೆ. ಅಂದಿನ ಶುಭ ರಾತ್ರಿ, ನಾವಿಬ್ಬರೂ ಏಕಾಂತದಲ್ಲಿದ್ದಾಗ, ಒಂದೆರಡು ಸವಿನುಡಿಗಳನ್ನಾಡಿದ ನಂತರ, ನಾನು ಮೆಲುನಗೆ ನಗುತ್ತಾ, ಅವಳ ಕಿವಿಯಲ್ಲಿ ಉಸುರಿದೆ.

'ಇನ್ನು ಮುಂದೆ ಏನಿದ್ದರೂ ನೀನು ನನ್ನಾಣತಿಯಂತೆ ನಡೆಯಬೇಕು' ಎಂದೆ.
ತಕ್ಷಣವೇ ನನ್ನಿಂದ ದೂರ ಸರಿದು.

'ಅದೇಕೆ ?' ಎಂಬ ಪ್ರಶ್ನೆಯನ್ನು ಹುಬ್ಬುಗಂಟಿಕ್ಕುವುದರ ಮೂಲಕ ವ್ಯಕ್ತಪಡಿಸಿದಳು ನನ್ನ ಪ್ರೇಯಸಿ.

'ಏಕೆಂದರೆ, ನಾನೇ ತಾನೇ ನಿನ್ನ ಮೇಲೆ ಮೊದಲು ಅಕ್ಷತೆ ಹಾಕಿದ್ದು ?' ಎಂದು ನಾನು ಬೆಸಗೈದೆ.

ಇನ್ನು ಈ ಮೌನ ಸಲ್ಲದು ಎಂದು ತಿಳಿದು,

'ಯಾರ್ರೀ ಹೇಳಿದ್ದು, ನಾನು ಮೊದಲು ಹಾಕಿದೆ ಅಕ್ಷತೇನ' ಎಂದು ಕರ್ಣಕಠೋರವಾಗಿ ನುಡಿದಳು.

ಇಷ್ಟು ಸಾಲದೇ ಜಗಳಕ್ಕೆ ? ರಾತ್ರಿ ಯುದ್ಧಕ್ಕೂ ಕಲಹವಾಡಿ, ಸುಸ್ತಾಗಿ, ಬೆಳಗಿನ ಜಾವ ಮೂರೆಕ್ಕೆ ಮಲಗಿದವರು ಬೆಳಿಗ್ಗೆ ಒಂಭತ್ತಕ್ಕೆ ಎದ್ದೆವು.

ಬೆಳಗಿನ ವಿಧಿಗಳನ್ನು ಮುಗಿಸಿದ ನಂತರ, ಇಬ್ಬರೂ, ನಮ್ಮ ನಮ್ಮ ಪಕ್ಷದ ಮುತ್ತೈದೆಯರನ್ನು ಅರಸಿ ಕರೆತಂದು, ನಮ್ಮ ನಮ್ಮ ಪರವಾಗಿ ಸಾಕ್ಷಿ ನುಡಿಸಿ ನಮ್ಮ ವಾದವನ್ನು ಮತ್ತೆ ಮುಂದುವರಿಸಿದೆವು.

ಆದರೆ, ಆ ಧೂರ್ತ ಮುತ್ತೈದೆಯರಿಗೆ ಬೇಕಿದ್ದುದು ಕೂಡ ಅದೇ ತಾನೇ ? ನನ್ನ ಪಕ್ಷದವರು ನನ್ನ ಪರವಾಗಿಯೂ, ಅವಳ ಪಕ್ಷದವರು ಅವಳ ಪರವಾಗಿಯೂ ಸಾಕ್ಷ್ಯ ನುಡಿದಿದ್ದರಿಂದ ವಿವಾದವು ಬಗೆ ಹರಿಯಲಿಲ್ಲ.

ಅದಕ್ಕೇ ನಾನು ವೀಡಿಯೋ ಬಗ್ಗೆ ಪ್ರಸ್ತಾಪಿಸಿದ್ದು. ಒಂದು ವೇಳೆ ವೀಡಿಯೋ ರಿಕಾರ್ಡಿಂಗ್ ಮಾಡಿದ್ದಿದ್ದರೆ, ಅದನ್ನು ರಿಪ್ಲೇ ಮಾಡಿ, ಅಕ್ಷತಾರೋಪದ ಆರಂಭದ ಕ್ಷಣವನ್ನು ಫ್ರೀಜ್ ಮಾಡಿ, ತಕ್ಷಣವೇ ಕಲಹವನ್ನು ಬಗೆಹರಿಸಬಹುದಿತ್ತು. ಆದರೆ, ಅಕಟಕಟಾ, ನಾವು ಆ ಭಾಗ್ಯವನ್ನು ಪಡೆದಿರಲಿಲ್ಲ.

ಹೀಗೆ ಆರಂಭವಾದ ನಮ್ಮ ಸಮರ ಅಲ್ಪಕಾಲದಲ್ಲಿ ಬಗೆ ಹರಿಯಲಿಲ್ಲ. ಢುಂ, ಢುಂ, ಎಂದು ಆರ್ಭಟದಿಂದ ಆರಂಭವಾಗಿ, ಕೇವಲ ತಿಂಗಳೆರಡರಲ್ಲಿ ಸಮಾಪ್ತಿಯಾಗಲು ಇದೇನು ಕೊಲ್ಲಿ ಯುದ್ಧವೇ ? ನಮ್ಮ ಕಲಹ ಆರಂಭವಾಗಲು ಕಾರಣವಾದ ನೆಪ ನಮ್ಮಿಬ್ಬರಿಗೂ ಮರೆತು ಹೋದರೂ ಕೂಡ, ಹೊಸ ನೆಪಗಳಿಗೆ ಹುಡುಕುತ್ತಿದ್ದ ನಮ್ಮ ಮನಗಳಿಗೆ, ಅವುಗಳನ್ನು ಕಂಡು ಹಿಡಿಯುವುದು ಕಷ್ಟದ ಕೆಲಸವೇ ?

ನನ್ನ ಹಳೆಯ ಗೆಳತಿಯೊಬ್ಬರು, ಬಹುಕಾಲದ ನಂತರ, ನನ್ನನ್ನು ಜ್ಞಾಪಿಸಿಕೊಂಡು, ಸ್ವಾರಸ್ಯವಾದ ಪತ್ರವೊಂದನ್ನು ಬರೆದರೆ, ಅದೇ ನನ್ನ ಹೆಂಡತಿಗೆ ಪ್ರಬಲ ಅಸ್ತ್ರವಾಗಬೇಕೆ ? ನಾನಾದರೂ, ಬಿಟ್ಟೆನೇ ?

ಮನವೊಲಿದಿಹ ಪ್ರಿಯ ಬಾರಾ......ಎಂದು ಅವಳೊಮ್ಮೆ ಗುನುಗುತ್ತಿದ್ದಾಗ, ಯಾರೇ ನಿನ್ನ ಆ ಪ್ರಿಯಕರ, ಎಲ್ಲಿರುವನೇ ಅವನು ? ಎಂದು ಹಿರಣ್ಯಕಶ್ಯಪುವಿನ ಧಾಟಿಯಲ್ಲಿ ಅವಳನ್ನು ಜರಿದಿದ್ದೆ.

ಇಂತಹ ಕಲಹ ಕೇವಲ ಇಪ್ಪತ್ತು ವರ್ಷಗಳಲ್ಲಿ ಹೇಗೆ ಕೊನೆಗೊಂಡಿತು ? ಇದಕ್ಕೆ ಕಾರಣರಾರು ? ಅವರು ನಮಗೆಲ್ಲಿ ದೊರಕುವರು ? ನಾವು ಕೂಡ ಅವರ ಕೃಪೆಯನ್ನು ಪಡೆಯಲು ಸಾಧ್ಯವೇ ? ಎಂದು ಸೂತಕರು ಶೌನಕಾದಿಗಳನ್ನು ಕೇಳಿದ ವರಸೆಯಲ್ಲಿಯೇ, ಅನೇಕ ಕಲಹನಿರತ ದಂಪತಿಗಳು ನನ್ನನ್ನು ಕೇಳಬಹುದು.

ಯಾರು ಈ ಮಹಾನುಭಾವರು ? ಪಂಡಿತರೋ ? ಸಾಧುಗಳೋ ಮಾಂತ್ರಿಕರೋ ಪವಾಡ ಪುರುಷರೋ ಎಂದು ಉದ್ಗರಿಸದಿರಿ. ಏಕೆಂದರೆ ಅವರು ಅಂತಹ ಆಪರೂ

ಪದ ವ್ಯಕ್ತಿಗಳಲ್ಲ. ಹಾಗೆ ನೋಡಿದರೆ ಅವರು ವ್ಯಕ್ತಿಯೇ ಅಲ್ಲ. ನಿಮ್ಮಲ್ಲಿ ಅನೇಕರ ಬಳಿ ಈಗಾಗಲೇ ಇರಬಹುದಾದ 'ಮೂರ್ಖರ ಪಟ್ಟಿಗೆ' ಅರ್ಥಾತ್ ಟಿ. ವಿ. ನಮಗೆ ಅನುಗ್ರಹವಾದುದ್ದು ಈ ಟಿ. ವಿ. ಯಿಂದಲೇ ಎಂದರೆ ನಿಮಗೆ ಅಚ್ಚರಿ ಯಾಗಬಹುದಲ್ಲವೇ ?

ನಮ್ಮ ಇಂದಿನ ಸಾಮಾಜಿಕ ಜೀವನದಲ್ಲಿ, ಕಂಡು ಬರುವ ಎಲ್ಲ ಲೋಪದೋಷಗಳಿಗೆ– ಉದಾಹರಣೆಗೆ, ಚಿಕ್ಕಮಕ್ಕಳು ತಾವು ಟಿ. ವಿ. ಯಲ್ಲಿ ಕೇಳಿದ 'ಕ್ವಿಜ್' ಪ್ರಶ್ನೆಯನ್ನು ತಮ್ಮ ಹಿರಿಯರಿಗೆ ಕೇಳಿ ಅವರಿಂದ 'ಅಧಿಕ ಪ್ರಸಂಗಿ, ಬ್ಾಯಮುಚ್ಚು' ಎಂದು ಬೈಸಿಕೊಳ್ಳುವ, ಇಲ್ಲವೇ 'ನಾನಾಗ್ಲೇ ಹೇಳ್ದೆ ಕಣೇ, ಈ ಟಿ. ವಿ. ಗೀವಿ ಬೇಡ, ಹುಡುಗರ ಓದು ಹಾಳಾಗುತ್ತೆ ಅಂತ. ಈಗ ನೋಡು, ನಿನ್ನ ಕುಮಾರ ಕಂಠೀರವ ಹನ್ನೊಂದು ಬಾರಿ ಫೇಲಾಗಿದ್ದಾನೆ, ಈ ಟಿವಿಯ ಸಹವಾಸದಿಂದ' (ಅವರು ಟಿ. ವಿ. ಕೊಳ್ಳುವ ಮೊದಲೇ ಅವನು ಹತ್ತು ಬಾರಿ ಫೇಲಾಗಿದ್ದ ಎಂಬುದು ಸದ್ಯಕ್ಕೆ ಅಪ್ರಸ್ತುತ) ಎಂದು ಆರೋಪಿಸಿದಾಗ, ಈ ಟಿವಿಯೇ ನಮ್ಮ ಸರ್ವತೋ ಮುಖ ಅಧೋಗತಿಗೆ ಕಾರಣ ಎಂಬ ಭಾವನೆ ವ್ಯಕ್ತವಾಗುತ್ತದೆ. ಆದರೆ ಇದರಿಂದಾಗುವ ಲಾಭಗಳ ಬಗ್ಗೆ ಮಾತ್ರ ಅಪರೂಪವಾಗಿ ಕೇಳುತ್ತೀರಿ.

ಮೊನ್ನೆ ಮಕ್ಕಳಿಗೆ ದಸರಾ ರಜೆ ಆರಂಭವಾದಾಗ, ನಾನೂ ಒಂದು ತಿಂಗಳುಗಳಿಕೆ ರಜೆ ಹಾಕ್ದಿದೆ. ಅದಕ್ಕೆ ಎರಡು ತಿಂಗಳ ಹಿಂದಿನಿಂದಲೂ ಇವಳು ನನ್ನ ಪಕ್ಕೆಯನ್ನು ತಿವಿಯುತ್ತಲೆ ಇದ್ದಳು.

'ಒಂದು ತಿಂಗಳು ರಜಾ ಹಾಕ್ರೀ, ಹಾಗೇ ಎಲ್ಲಾದರೂ ಪ್ರವಾಸ ಹೋಗಿ ಬರೋಣ' ಅಂತ.

ಅವಳ ಕಾಟ ತಡೀಲಾರ್ದೆ ಒಂದು ತಿಂಗಳ ರಜೆಗೆ ಅರ್ಜಿ ಹಾಕಿದ್ದೆ. ಮಂಜೂರೂ ಆಯ್ತು. ಅವಳಿಗೆ ತಿಳಿಸಿದಾಗ, ಅವಳಿಗೆ ಭಾರೀ ಖುಷೀನೂ ಆಯ್ತು, ಆದರೆ ಪ್ರವಾಸ ಹೋಗೋದಿಕ್ಕೆ ನನ್ನ ಹತ್ರ ಹಣ ಇಲ್ಲ ಅಂತ ಇದ್ದದ್ದನ್ನು ಇದ್ದ ಹಾಗೇ ಹೇಳಿದಾಗ, ಮುಖ ಊದಿಸ್ಕೊಂಡು,

'ಈ ಭಾಗ್ಯಕ್ಕೆ ರಜೆ ಯಾಕೆ ಎಂದು ನನ್ನ ಮೂತಿ ತಿವಿದಳು.

'ಅಂತೂ ಇಂತೂ ನನಗೆ ಬಲವಂತದಿಂದ ಒಂದು ತಿಂಗಳು ಮನೆಯಲ್ಲಿಯೇ ಕಳೀಬೇಕಾಯ್ತು, ಅದುವರೆಗೂ ಮಧ್ಯಾಹ್ನದ ಟೀವೀನ ನಾನು ನೋಡ್ತಾನೇ ಇರಲಿಲ್ಲ. ಅವಳಿಗಂತೂ ವಿರಾಮದ ಸಮಯ ಮಾಡೋಕೆ ಬೇರೆ ಕೆಲಸವಿಲ್ದೆ, ದಿನವೂ ತಪ್ಪದೆ, ಮಧ್ಯಾಹ್ನದ ಪ್ರಸಾರ ನೋಡಲು ಶುರುಮಾಡಿದೆ.

ನೋಡ್ತಾ, ನೋಡ್ತಾ ನನಗೆ ಆಶ್ಚರ್ಯವಾಯ್ತು, ಪ್ರತಿಯೊಂದು ಕತೇನಲ್ಲೂ ಪತಿ ಪತ್ನಿಯರ ವಿರಸ. ವಿರಸಕ್ಕೆ ಕಾರಣ ಮಾತ್ರ ಬೇರೆ ಬೇರೆ, ಬಲವಂತ ಮಾಡಿ, ಇವಳನ್ನು ಎಬ್ಬಿಸಿ ಕೊಡಿಸಿ, ಅವಳಿಗೂ ಈ ಕಾರ್ಯಕ್ರಮಗಳನ್ನು ದಿನನಿತ್ಯ ನೋಡೊ ಹಾಗೆ ಮಾಡ್ದೆ

ಇನ್ನೇನು, ಮರುದಿವಸ ನನ್ನ ರಜೆ ಮುಗೀತಾ ಇದೆ, ಆಗ ಅವಳು ತನ್ನ ಧ್ವನೀನ ಬೆಣ್ಣೆಯಷ್ಟು ಮೃದುಮಾಡಿ,

'ಅಲ್ಲಾರಿ,! ಎಲ್ಲರ ಮನೆಯಲ್ಲೂ ಗಂಡ ಹೆಂಡಿರ ಜಗಳ ಇದ್ದೇ ಇದೆಯಲ್ರೀ ನಾವಿಬ್ಬರು ಮಾತ್ರ ಜಗಳ ಆಡ್ತೀವಿ ಅಂತ ಮಾಡಿದ್ದೆ. ಎಲ್ರೂ ಮಾಡೋದನ್ನೆ ನಾವೇಕೆ ಮಾಡಬೇಕೂರೀ ? ಅಂದರೆ, Let us be different ! ಅನ್ನುವ ಧಾಟಿಯಲ್ಲಿ ಹೇಳಿದಳು. ನನಗೂ ಸರಿಸುಮಾರು ಹಾಗೇ ಅನಿಸ್ತಾ ಇತ್ತು.

ಇಷ್ಟು ಅರಿವಾದದ್ದೇ ಸಾಕಾಯ್ತು ನೋಡಿ, ಕಿಸಾಗೋತಮಿಗೆ ಜ್ಞಾನೋದಯವಾದ ಹಾಗ, ನಮ್ಮಿಬ್ಬರಿಗೂ ಜ್ಞಾನೋದಯವಾಗಿ, ನಮ್ಮ ಇಪ್ಪತ್ತು ವರುಷಗಳ ಕಲಹಕ್ಕೆ ಮಂಗಳ ಹಾಡಿದೆವು.

'ಹಾಗಾದ್ರೆ, ನೀವು ಈಗ ಜಗಳ ಆಡೋದೇ ಇಲ್ವೆ ? ಅಂತ ಮೂಗಿನ ಮೇಲೆ ಬೆರಳಿಟ್ಕೋ ಬೇಡಿ.

ಹಾಗೆಲ್ಲಾ ತಟಕ್ಕಂತ ನಿಲ್ಲಿಸೋಕಾಗುತ್ಯೇ ?

ಆಡ್ತೀವಿ, ಆಗೊಮ್ಮೆ, ಈಗೊಮ್ಮೆ, ಹೆಚ್ಚು ಸೀರಿಯಸ್ ಆಗಿ ಅಲ್ಲ. ಒಂಥರಾ ಪ್ರೇಮಕಲಹದ ತರಹಾ !

ಅವರವರ ಕರ್ಮ !

ಪ್ರಭಾ

ಸಕಲ ಜೀವರಾಶಿಗಳು ಈ ಜಗತ್ತಿನಲ್ಲಿ ಜನ್ಮ ತಳೆಯುವ ಮುನ್ನ ಬ್ರಹ್ಮನ ಬಳಿ ಒಂದು ಇಂಟರ್ ವ್ಯೂ ಬೇಕೆಂದವಂತೆ. ಹೇಳಿ ಕೇಳಿ ಭೂಮಿ ಸಂಪರ್ಕವನ್ನು ಬ್ರಹ್ಮ ಇನ್ನೂ ಪಡೆದಿರಲಿಲ್ಲ. ಮತ್ತು ತನ್ನ ಪ್ರಜೆಗಳ ಮೇಲೆ ಅನುಕಂಪ, ಪ್ರೀತಿ, ದಯೆ ದಾಯನ್ಯ ಇನ್ನೂ ಏನೇನೊ ಅವಸಗಳನ್ನು ಹೊಂದಿದ್ದ. ಆದರಿಂದ ತಡ ಇಲ್ಲದೇ ತನ್ನ ಪ್ರಿತಿ ಪಾತ್ರರಾದ ಇಂಟರ್‌ವ್ಯೂ ಬೇಡಿದ ಜೀವರಾಶಿಗಳನ್ನು "ಆಯಿಯೇ ಬೊಲಿಯೇ ಕ್ಯಾ ಹೋನಾ?" ಅಂದ. ದೂರದರ್ಶನದ ಇಂಪ್ಯಾಕ್ಟ್ ಬ್ರಹ್ಮನೆ ಮೇಲೆ ಆಗಿಲ್ಲದೇ ಇದ್ದರೂ ಮುಂದಾಗಬಹುದಾದ್ದನ್ನು ಅರಿತಂತಹ ಮಹಿಮ ಆತ, ತನ್ನ ಪ್ರೀತಿ ಪಾತ್ರರಿಗೆ ಆದರದಿಂದ."ಹೇಳಿ ಹೇಳಿ ನಿಮ್ಮ ಕುಂದು ಕೊರತೆಗಳೇನು" ಅಂತ ಕೇಳಿದ.

ಜೀವರಾಶಿಗಳು ಬ್ರಹ್ಮನ ಸುತ್ತ ವೃತ್ತಾಕಾರದಲ್ಲಿ ಸೇರಿದವು. ನಾಲ್ಕು ದಿಕ್ಕಿನಲ್ಲಿ ಬಹ್ಮನ ತಲೆಯಿದ್ದುದರಿಂದ ಪ್ರತಿ ಜೀವಿಯೂ ಬ್ರಹ್ಮ ತನ್ನನ್ನೇ ನೋಡುತ್ತಿದ್ದಾನೆ, ತನ್ನತ್ತಲೇ ಗಮನ ಹರಿಸುತ್ತಿದ್ದಾನೆ ಎಂದು ನಂಬಿದ್ದವು. ಬ್ರಹ್ಮನ ಬಗೆಗೆ ಒಂದು ರೀತಿಯ ಪುನೀತಭಾವ, ಆರಾಧ್ಯಭಾವ, ಮತ್ತು ಬ್ಲೆಸ್ ಮೈ ಸೌಲ್ ಎಂಬ ವಿನೀತಭಾವಗಳು ಈ ಜೀವರಾಶಿಯಲ್ಲಿ ಸ್ಫುರಿಸಿದುವು. ಜೀವರಾಶಿಗಳು ಒಂದೊಂದಾಗಿ ಎದ್ದು ತಮ್ಮ ಅಹವಾಲನ್ನು ಹೇಳಿಕೊಂಡವು.

ಪ್ರಭೂ ಭೂಮಂಡಲದಲ್ಲಿ ಜನ್ಮ ತಳೆಯುವ ಆದೇಶವನ್ನು ತಾವು ದಯಪಾಲಿಸಿರುವಿರಿ. ಅದಕ್ಕಾಗಿ ನಿಮ್ಮ ಮೇಲೆ ನಮಗೆ ಕೋಪ ಖಂಡಿತ ಇಲ್ಲ. ತಮ್ಮ ಅನುಜ್ಞೆಯಂತೆ ನಡೆಯುವ ಕ್ರಿಮಿಗಳು ನಾವು. ಜಗತ್ತಿನಲ್ಲಿ ಕೋಡ್ ಆಫ್‌ಕ್ಯಾಂಡಕ್ಟ್ ಎಂತಿರಬೇಕು ಎಂಬುದನ್ನು ತಾವು ತಿಳಿಸಬೇಕು. ಎಂದು ಅಡ್ಡ ಬಿದ್ದವು.

ಬ್ರಹ್ಮ ನಾಲ್ಕು ಮುಖದಲ್ಲಿನ ನಾಲ್ಕು ಬಾಯಿಗಳಿಂದ ಮೂವತ್ತೆರಡು ಇಂಟು ನಾಲ್ಕು ಹಲ್ಲುಗಳು ಹಾರುವಂತೆ ನಕ್ಕ, ನನ್ನ ಅತ್ಯಂತ ಆಪ್ತರಾದ. ಪ್ರೀತಿಪಾತ್ರ

ರಾದ ಆತ್ಮೀಯರಾದ ಜೀವರಾಶಿಗಳೇ ನಿಮ್ಮಂತಹ ವಿಧೇಯ ಗಣಗಳನ್ನು ಪಡೆದ ನಾನೇ ಭಾಗ್ಯಶಾಲಿ. ಜಗತ್ತಿನಲ್ಲಿನ ನಿಮ್ಮ ನಡವಳಿಕೆ ಬಗ್ಗೆ ಹೇಳುತ್ತಿದ್ದೀರಿ. ಹೊಕ್ಕ ಮನೆಗೆ ಎರಡು ಬಗೆಯದ ಹಾಗೆ ತವರಿನ ಮೇಲೆ ಯಾರೂ ಬೇಸರ ಪಡೆದ ನಿಮ್ಮ ನಡವಳಿಕೆ ಇರಲಿ......ಎಂದ.

ಬ್ರಹ್ಮನ ಈ ಅಡ್ಡಗೋಡೆ ಮೇಲೆ ದೀಪ ಇರಿಸುವಂತಹ ಮಾತುಗಳನ್ನು ಕೇಳಿದ ಜೀವರಾಶಿಗಳು ಕಕ್ಕಾಬಿಕ್ಕಿಯಾದವು. ಮತ್ತೊಮ್ಮೆ ಅಡ್ಡ ಬಿದ್ದವು" ಪ್ರಭೋ ತಮ್ಮ ಆಜ್ಞೆಗೆ ನಾವು ಎಂದೂ ತಲೆಬಾಗಿದ್ದೆವು. ಈಗಲೂ ಹಾಗೇ ತಮ್ಮ ಆಣತಿ ಯನ್ನು ತಲೆ ಮೇಲೆ ಹೊತ್ತು ಪಾಲಿಸುತ್ತೇವೆ. ಆದಾಗ್ಯೂಸಹ ನಮಗೆ ಸ್ಪಷ್ಟವಾಗಿ ಗೆರೆಹಾಕಿದ ಹಾಗೆ ನೀನು ಇಂತಿತದ್ದು ಮಾಡು, ಇಂತಿಂತದ್ದು ಮಾಡ ಬೇಡ ಎಂದು ತಿಳಿಸುವ ಕೃಪೆ ಮಾತು ಪ್ರಭೋ......ಎಂದು ಮತ್ತೆ ಅಡ್ಡ ಬಿದ್ದವು.

ಬ್ರಹ್ಮದೇವರು ಒಂದೆರಡು ಕ್ಷಣ ಚಿಂತಿಸಿದ. ಆತ್ಮೀಯ ಜೀವರಾಶಿಗಳೇ ಜಗತ್ತಿನಲ್ಲಿರುವಷ್ಟು ಕಾಲ ನಾಲ್ಕು ಜನರಿಗೆ ಉಪಯೋಗವಾಗುವಂತಹ ಕೆಲಸ ನಡೆಸಿ ಅಂತ ಆಶೀರ್ವದಿಸಿದ.

ಅಲ್ಲಿಯ ತನಕ ತೂಕಡಿಸುತ್ತ ಕುಳಿತಿದ್ದ, ಮನುಜನ ಮೂಲ ಪುರುಷನಿಗೆ ಆಗ ಎಚ್ಚರವಾಯಿತಾ.

'ಪ್ರಭೋ ಏನು ಹೇಳಿದಿರಿ ? ಅಂದ

ಇವನು ತೂಕಡಿಸುತ್ತ ಕೂತಿದ್ದದ್ದನ್ನ, ಬ್ರಹ್ಮ ಈವರೆಗೆ ಅವಲೋಕಿಸಿದ್ದ. ಎಲ್ಲಾ ಸಲಹೆ ನೀಡಿದನಂತರವೂ ಏನು ಹೇಳಿದಿರಿ ಎಂದು ಕೇಳಿದ ಈ ಜೀವರಾಶಿಯ ಮೇಲೆ ಬ್ರಹ್ಮನಿಗೆ ಅಸಾಧ್ಯ ಕೋಪಬಂತು "ಇದೇ ಭೂಮಂಡಲದಲ್ಲಿ ಇಲ್ಲದ ಸಲ್ಲದ ತಾಪತ್ರಯಗಳನ್ನು ತಲೆಗೆ ಹಚ್ಚಿಕೊಂಡು ಕೊರಗುವ ಕ್ಷುದ್ರ ಜೀವಿಯಾಗಿರು" ಎಂದು ಅರೇ ಪ್ರೀತಿ ಅರೆ ಕೋಪದಲ್ಲಿ ಹೇಳಿದ ; ಹೇಳಿದ ಏನು ಶಾಪ ಹಾಕಿದ.

ಮನುಜನಿಗೆ ಒಂದು ರೀತಿ ಎಡಬಿಡಂಗಿ ಆಯಿತು. ಅನ್ನಿಸಿತು.

ಪ್ರಭೋ ಮನ್ನಿಸಿ, ಮನ್ನಿಸಿ, ಮನ್ನಿಸಿ, ಎಂದು ಅರ್ಧ ಘಂಟೆಯ ಒಂದು ಹಾಡು ಹೇಳಿದ.

ಹಾಡು ಕೇಳಿದ ಬ್ರಹ್ಮ ಸಂಪ್ರೀತನಾದ.

ಎಲೈಮನುಜ ಬಹಳ ಚೆನ್ನಾಗಿ ಹಾಡು ಹೇಳಿದೆ. ನಿನ್ನ ಹಾಡನ್ನು ಮೆಚ್ಚಿದ್ದೇನೆ ಭೂಮಂಡಲಕ್ಕೆ ಹೋಗುತ್ತಿರುವೆ. ಇಲ್ಲದ ಸಲ್ಲದ ತಾಪತ್ರಯಗಳು ನಿನ್ನ ತಲೆ ತುಂಬಲಿ ಎಂದು ನಾನಿತ್ತಿರುವಶಾಪ ಶಾಪವೇ.ಅದನ್ನು ನಾನೇ ಹಿಂದೆ ತೆಗದುಕೊಂಡು ಡಿಫ್ಯೂಸ್ ಮಾಡುವ ಹಾಗಿಲ್ಲ......ಮನುಜ ಮತ್ತೆ ದಯಪಾಲಿಸೋ......ಎಂಬ ಹಾಡು ಆರಂಭಿಸಿ ಒಂದೂವರೆ ಘಂಟೆಗಳ ಕಾಲ ಹೇಳಿದ.

ಬ್ರಹ್ಮನು ಕಲ್ಲಿನಂತಹ ಮನಸ್ಸು ಈಗ ಬೆಣ್ಣೆಯ ಹಾಗೆ ಆಯಿತು. ವತ್ಸಾ, ನಿನ್ನ ಭಕ್ತಿಗೆ ಮೆಚ್ಚಿದೆ. ನಾನಿತ್ತಿರುವ ಶಾಪ ನಾನೇ ಹಿಂತೆಗೆದುಕೊಳ್ಳುವ ಹಾಗಿಲ್ಲ ವಾದ್ದರಿಂದ ನೀನೂ ಆಗಾಗ್ಗೆ ನಿನ್ನ ತರಲೆ ತಾಪತ್ರಯಗಳನ್ನು ಮರೆಯುವಂತಹ ಒಂದು ವಿಶಿಷ್ಟವಾದ, ಇದೇ ಭೂಜಗತ್ತಿನಲ್ಲಿಯೋ ಬೇರಾರಿಗೂ ಇರದಂತಹ ಒಂದು ಸವಲತ್ತನ್ನು ನಿನಗೆ ಮಾತ್ರ ದಯಪಾಲಿಸುತ್ತೇನೆ ಅಂದ

ಮನುಜ ಮತ್ತೆ ಹಾಡು ಪ್ರಾರಂಭಿಸಿದ.

ಕೊಂಚ ತಡಿ ಎಂದ ಬಹ್ಮ. ಈ ಸಲ ಹಾಡು ಪ್ರಾರಂಭಿಸಿದರೆ ಅದು ಎಷ್ಟು ಹೊತ್ತು ಮುಂದುವರಿಯಬಹುವುದೋ ಎಂಬ ದಿಗಿಲು ಆತನಿಗೆ, ಮನುಜ ಕೊಂಚ ತಡೆದ.

'ಬೇರೆ ಯಾವ ಜೀವಿಗಳಿಗೂ ಇಲ್ಲದ ನಗುವ, ಮನಸಾರೆ ನಗುವ, ಸಂತೋಷ ಪಡುವ, ವಿಶಿಷ್ಟವಾದ, ಒಂದು ಅತ್ಯಪೂರ್ವವಾದ ಚೆಲುವು ನಿನಗಿತ್ತಿದ್ದೇನೆ. ಭೂಮಂಡಲದಲ್ಲಿ ಈ ಸವಲತ್ತು ಯಾರಿಗೂ ಇಲ್ಲ ಎಂಬುದು ಅರಿತುಕೋ, ನಗೆ ಇತ್ತಿದ್ದೇನೆ. ಅದನ್ನು ಸೂಕ್ತವಾಗಿ ಬಳಸಿಕೊಂಡು ನೀನೂ ಮತ್ತು ನಿನ್ನ ಸುತ್ತ ಮುತ್ತಿನವರನ್ನೂ ಸಂತೋಷದಿಂದಿರಿಸುವುದು ನಿನ್ನ ಕರ್ತವ್ಯದ ಭಾಗದಲ್ಲಿ ಒಂದು...ಎಂದು ಆಶೀರ್ವಚನ ನೀಡಿದ, ಬ್ರಹ್ಮನ ಆಣತಿಯಂತೆ ಜೀವರಾಶಿಗಳು ಈ ಗ್ರಹದಲ್ಲಿ ಜನ್ಮ ತಳೆದವು.

ನಗು ಎಂಬುವುದು ಮನುಷ್ಯ ಜಾತಿಗೆ ಮಾತ್ರ ಒಂದು ಪ್ರಧಾನವಾಗಿರುವ ಅನುಕೂಲ. ಆದರೂ ಈ ಜಗತ್ತಿನಲ್ಲಿನ ಕೆಲಮನುಜರು ಎಂದೂ ನಗುವುದಿಲ್ಲವಂತೆ, ತಲೆ ಮೇಲೆ ಕೈಹೊತ್ತು ದೇವರೇ ನನ್ನನ್ನು ಯಾಕೆ ಹುಟ್ಟಿಸಿದೆ ಎಂದು

ಗಂಟು ಮೂತಿ ಹೊತ್ತು ದೀರ್ಘ ಚಿಂತೆಯಲ್ಲಿ ಇರುವವರಂತೆ, 'ಎಲ್ಲಿ ಕೊಂಚ ನಗಿ' ಎಂದರೂ ಇಲ್ಲ ನಾನು ನಗೋಲ್ಲ. ನಾನಿರೋದೇ ಹೀಗೆ' ಎನ್ನುವವರಂತೆ, ಇಂತಹ ನಾನು ನಗಲಾರೆ ಎಂಬ ಜನಕ್ಕೆ ಏನು ಹೇಳುವುದು ಎಂದು ಬ್ರಹ್ಮನ ಚಿಂತೆಯೇ ನಮ್ಮಂತಹವರಿಗೂ ಸಹ ಅಮರಿಕೊಂಡಿದೆ.

ಮೊನ್ನೆ ಬ್ರಹ್ಮ ಕನಸ್ಸಿನಲ್ಲಿ ಕಾಣಿಸಿಕೊಂಡ. ಆತನಿಗೆ ನಗಲಾರದ ನಮ್ಮ ಜನರ ಬಗೆಗೆ ತುಂಬಾ ವಿಷಾದದಿಂದ ಹೇಳಿದೆ. ಬ್ರಹ್ಮ ನಸುನಕ್ಕ ಹಾಳಾಗಲಿ ಬಿಡು ನಗೋದಿಲ್ಲ ಎಂದರೆ ಅದು ಅವರ ಕರ್ಮ ಅವರು ಪಡೆದು ಬಂದಿದ್ದು. ಆದಕೆ ನಾನೇನು ಮಾಡಲಿ ? ...ಎಂದು ಹತಾಶನಾಗಿ ಕೈ ಚೆಲ್ಲಿದ, ಬ್ರಹ್ಮನ ಆಣತಿ ಮೀರುತ್ತೇನೆ ಎಂದರೆ... ಹಾಳಾಗಲಿ ಬಿಡಿ ಅದು ಅವರು ಪದೆದು ಬಂದಿದ್ದು. ಅವರವರ ಕರ್ಮ.........

ಖಂಡಿತ ದೇವೇಗೌಡರನ್ನು ಕುರಿತದ್ದಲ್ಲ !

ಆಫೀಸಿನ ಮ್ಯಾನೇಜರ್ ಬಹಳ ಹಾಸ್ಯಪ್ರಿಯ. ದಿನಾಗಲೂ ಲಂಚ್ ಆದ ಮೇಲೆ ಹತ್ತು ನಿಮಿಷ ವಿರಾಮದ ಕಾಲದಲ್ಲಿ ಆಫೀಸಿನ ಟೈಪಿಸ್ಟ್ ಹುಡುಗಿಯರಿಗೆಲ್ಲಾ ಜೋಕ್ಸ್ ಹೇಳಿ ನಗಿಸುತ್ತಿದ್ದ. ಆ ದಿನ ಅವನ್ನು ಜೋಕ್ ಹೇಳಿದ್ದಕ್ಕೆ ಎಲ್ಲರೂ ಬಿದ್ದು ಬಿದ್ದು ನಕ್ಕರೂ, ಟೈಪಿಸ್ಟ್ ಹರಿಣಿ ಮಾತ್ರ ಗಂಭೀರವಾಗಿ ಕೂತಿದ್ದಳು.

"ಯಾಕ್ರಿ ಹರಿಣಿ, ನನ್ನ ಜೋಕ್ ಚೆನ್ನಾಗಿಲ್ವಾ" ಅಂತ ಕೇಳಿದ ಮ್ಯಾನೇಜರ್

"ನನಗೆ ಬೇರೆ ಡಿಪಾರ್ಟ್‌ಮೆಂಟ್‌ಗೆ ಟ್ರಾನ್ಸ್‌ಫರ್ ಆರ್ಡರ್ ಬಂದಿದೆ ಸಾರ್. ನಾನ್ಯಾಕೆ ನಕ್ಕು ಸುಸ್ತು ಮಾಡ್ಕೊಳ್ಳಲಿ" ಅಂದ್ರು ಜಾಣೆ ಹರಣಿ.

ಜಿಪುಣನ ಮಿತ್ರನ ಜಾಣತನ

–ನಂದಿನಿ ಕಾಪಡಿ

ಗೋವಾದ ಕಥೆ ಹೇಳುತ್ತಿದ್ದೆನಲ್ಲವೆ ? ಬಾರದೇಜ್ ತಾಲೂಕಿನ ಆಲ್ಡೋನಾ ಗ್ರಾಮದ ಈ ಕಥೆಯನ್ನು ನೀವು ಕೇಳಲೇ ಬೇಕು. ಪೆದ್ರು ಆಲವಾರಿಸ್ ಆ ಗ್ರಾಮದ ಜಿಪುಣಾಗ್ರೇಸರನೆಂದು ಹೆಸರು ಪಡೆದಿದ್ದ, ಹಡಗೊಂದರಲ್ಲಿ ಅಡಿಗೆಯವನಾಗಿ ಕೆಲಸ ಮಾಡುತ್ತಿದ್ದ ಅವನು ಶೇಖರಿಸಿದಷ್ಟು ಹಣ ಬೇರೆ ಯಾರ ಹತ್ತಿರವೂ ಇರಲಿಲ್ಲ ಏಕೆಂದರೆ ಶೇಖರಿಸಿದ ಹಣವನ್ನು ಎಂದೂ ಖರ್ಚು ಮಾಡುತ್ತಲೇ ಇರಲಿಲ್ಲ, ಬಂದ ದುಡ್ಡನ್ನೆಲ್ಲಾ ಚಿನ್ನದ ಸವರನ್ನುಗಳನ್ನು ತೆಗೆಯಲು ಖರ್ಚು ಮಾಡಿ ಬಿಡುತ್ತಿದ್ದ. ಆ ಸವರನ್ನುಗಳನ್ನು ಚರ್ಮದ ಚೀಲವೊಂದರಲ್ಲಿಟ್ಟು ಆ ಚೀಲವನ್ನು ಪೆಟ್ಟಿಗೆಯೊಳಗೆ ಜೋಪಾನ ಮಾಡುತ್ತಿದ್ದ.

ಪಾಪ ಅವನ ಹೆಂಡತಿ ಮಾರಿಯಾ ಇದ್ದ ಸಣ್ಣ ಜಮೀನಿನಲ್ಲಿ ಬೇಸಾಯ ಮಾಡುತ್ತಾ ಇರುವ ಪುಟ್ಟಮನೆ ಎಂಟು ಮಕ್ಕಳನ್ನು ಮುಂದೆ ತರುತ್ತಿದ್ದಳು, ಮಕ್ಕಳು ಬೆಳೆದು ದೊಡ್ಡವರಾಗಿ, ತಮ್ಮ ತಮ್ಮ ದಾರಿ ನೋಡಿ ಕೊಳ್ಳುತ್ತಾ ಗೋವಾ ಬಿಟ್ಟು ಹೊರಟೇ ಹೋದರು.

ಇತ್ತ ಪೆದ್ರು ಕಾಲಿಗೆ ಚಪ್ಪಲಿ ಹಾಕಿ ಕೊಂಡರೂ, ಸವೆದು ಹೋಗುತ್ತದೆ ಎಂಬ ಮನೋಭಾವನೆಯಿಂದ, ಇದ್ದ ಒಂದು ಶರಾಯಿ, ಶರ್ಟಿನಲ್ಲಿಯೇ ಜೀವನ ವೆಲ್ಲಾ ಕಳೆದ, ಪ್ರತಿ ದಿನ ಸಂಜೆಯಾದ ಕೂಡಲೇ ಗುಟುಕು ಗುಟುಕು ಕಾಜೂ ಫೇನಿ ಹೇರುತ್ತಾ ತನ್ನ ಚಿನ್ನದ ಗಂಟನ್ನು ಬಿಚ್ಚಿ, ಎಣಿಸಿದ ಸವರನ್ನುಗಳನ್ನೇ ಮತ್ತೆ ಮತ್ತೆ ಎಣಿಸುತ್ತಾ "ನಾನೆಷ್ಟು ಶ್ರೀಮಂತ" ಎಂದುಕೊಳ್ಳುತ್ತಿದ್ದ. ಪ್ರತಿಸಲ ಹಡಗಿಗೆ ಹೋದಾಗಲೂ ಇಪ್ಪತ್ತೈದು ಸವರನ್ನುಗಳನ್ನಾದರೂ ತಂದು ಶೇಖರಿಸುತ್ತಿದ್ದ. ತಾನು ಅಡಿಗೆ ಮಾಡುವಾಗ ಉಳಿಸುತ್ತಿದ್ದ ಮಸಾಲೆ, ಹಾಲಿನ ಪುಡಿ, ಬಾದಾಮಿ ಮುಂತಾದುವುಗಳನ್ನು ಜೋಪಾನವಾಗಿ ತಂದು ಹೆಂಡತಿಯ ಕೈಗೆ ಕೊಡುತ್ತಾ "ಮಿತವಾಗಿ ಉಪಯೋಗಿಸು" ಎನ್ನುತ್ತಿದ್ದ ಬೇರೆ ! ಅವನ ಧಾರಾಳತನವೆಂದರೆ, ಹಡಗಿನಲ್ಲಿ ಉಪಯೋಗಿಸಲು ಅಮೇರಿಕಾ ದೇಶದಿಂದ ತರುತ್ತಿದ್ದ ಹಿಟ್ಟಿನ ಚೀಲಗಳನ್ನು ನೀಟಾಗಿ ಕತ್ತರಿಸಿ, ಆ ಬಟ್ಟೆಗಳಿಂದ ವಸ್ತ್ರಗಳನ್ನು ತಾನೇ ಹೊಲಿದು ತಂದು

ಮಕ್ಕಳಿಗೆ ಕೊಡುವುದು. ಆ ಮಕ್ಕಳು ಆ ವಸ್ತ್ರಗಳನ್ನು ಒಳವಸ್ತ್ರಗಳಾಗಿಯೂ ಉಪಯೋಗಿಸಲು ಹಿಂಜರಿಯುವರೆಯುವರು.

ಇಷ್ಟೊಂದು ಕೃಪಣತನ ಮಾಡುವವನಿಗೆ ಒಬ್ಬನೇ ಒಬ್ಬ ಮಿತ್ರನಿದ್ದ. ಸಾಂತಾನ್ ಗೊನ್‌ಸಾಲ್ವಿಸ್ ಪೆದ್ರುವಿನೊಂದಿಗೇ ಪ್ರೈಮರಿ ಶಾಲೆಯಲ್ಲಿ ಕಲಿತಿದ್ದ. ಪೆದ್ರು ಒಮ್ಮೊಮ್ಮೆ ಗೆಳೆಯನಿಗೆಂದು ಹಡಗಿನ ಸಿಗರೇಟ್ ಡಬ್ಬಿಗಳನ್ನು ತಂದುಕೊಡುತ್ತಿದ್ದ. ಅದರ ಬದಲಾಗಿ ಸಾಂತಾನ್ ಒಂದು ತಿಂಗಳಿನವರೆಗಾದರೂ ಪೆದ್ರುವಿಗೆ ಸಾರಾಯಿ ಕುಡಿಸಬೇಕಾಗುತ್ತಿತು.

ಹೀಗೆಯೇ ಕಾಲ ಕಳೆದು ಹೋಯಿತು. ಪೆದ್ರು ವೃದ್ಧಾಪ್ಯದಿಂದ ಹಾಸಿಗೆ ಹಿಡಿದ. ಹೆಂಡತಿಗೆ ಡಾಕ್ಟರರನ್ನು ಕರೆಸುವುದೇನೂ ಬೇಡವೆಂದ, ಪಾಪ ಅವಳೋ ಮಕ್ಕಳಿಗೆಲ್ಲಾ ಹೇಳಿಕಳಿಸಿದಳು. ಗೂಡು ಬಿಟ್ಟು ಹೋದ ಮಕ್ಕಳೆಲ್ಲಾ ತಂದೆಯ ಕಡೆಗಾಲವೆಂದು ಹಳ್ಳಿಗೆ ಬಂದರು. ಎಂಟು ಹತ್ತುದಿನಗಳೇನೋ ಮಜವಾಗಿ ಕಳೆದವು. ನಂತರ ಮಕ್ಕಳೆಲ್ಲರೂ ಪದ್ರುವಿನ ಸ್ಥಿತಿಯನ್ನೇ ಗಮನಿಸುತ್ತಾ ಕಳೆದರು. ಒಂದು ದಿನ ಪೆದ್ರು ಪ್ರಜ್ಞಾಹೀನವಾದ. ಇನ್ನೇನು ಕಡೆಯುಗಳಿಗೆ ಸಮೀಪಿಸಿತೆಂದು ಪಾದ್ರಿಯನ್ನು ಬರಹೇಳಿದರು. ಕ್ರಿಸ್ತಧರ್ಮದ ಪ್ರಕಾರ ಸಾಯುವ ಮುಂದೆ ನಡೆಸಬೇಕಾದ ಕ್ರಿಯೆಗಳೆಲ್ಲಾ ನಡೆದವು. ಇನ್ನೂ ಎಂಟುದಿನಗಳು ಕಳೆದವು. ಪೆದ್ರು ಇಲ್ಲಿಯೂ ಇಲ್ಲ, ಅಲ್ಲಿಯೂ ಇಲ್ಲ ಸ್ಥಿತಿಯಲ್ಲಿಯೇ ಇದ್ದ ಇತ್ತ ಮಕ್ಕಳಿಗೆ ಚಡಪಡಿಕೆ ಪ್ರಾರಂಭವಾಯಿತು. ತಮ್ಮ ತಮ್ಮ ಮನೆ, ನೌಕರಿಗಳ ನೆನಪು ಕಾಡಿತು.

ಕಡೆಗೆ ದಾರಿ ತೋರಿಸಿದವನು ಪೆದ್ರುವಿನ ಏಕೈಕ ಮಿತ್ರ ಸಾಂತಾನನೇ. ಮಿತ್ರನ ಪ್ರಾಣ ಹೋಗದಿರುವ ಕಾರಣ ತಿಳಿದವನು ಅವನೊಬ್ಬನೇ. ಮಾರಿಯೂ ಹಾಗೂ ದೊಡ್ಡ ಮಗನ ಕಿವಿಯಲ್ಲಿ ಏನೋ ಪಿಸುಗುಟ್ಟಿದವನೇ ಪೆದ್ರುವಿನ ಪೆಟ್ಟಿಗೆ ತೆಗೆದು ಸಂಪತ್ತಿನ ಚೀಲ ತರಬೇಕೆಂದ. ಸುಮಾರು ಭಾರವಿರುವ ಚಿನ್ನದ ಚೀಲ ಬಂದಿತು. ಸಾಂತಾನನ್ನು ಅದನ್ನು ಪೆದ್ರುವಿನ ಎದೆಯ ಮೇಲಿಟ್ಟನಂತೆ. ಪೆದ್ರುವಿನ ಪ್ರಜ್ಞಾಹೀನ ಸ್ಥಿತಿಯಲ್ಲೂ ಒಂದು ವಿಲಕ್ಷಣ ನಗೆ ಮುಖದಲ್ಲಿ ಕಾಣಿಸಿಕೊಂಡು ಮರುಕ್ಷಣ ಪೆದ್ರುವಿನ ಪ್ರಾಣಪಕ್ಷಿ ಹಾರಿಹೋಯಿಂತೆ.

ಆಲ್ವಾರಿಸ್ ಪೆದ್ರು ಸತ್ತದ್ದು ತಾನು ಶೇಖರಿಸಿದ ಹಣವೆಲ್ಲವನ್ನೂ ತನ್ನೊಟ್ಟಿಗೇ ಪರಲೋಕಕ್ಕೆ ಒಯ್ಯುತ್ತಿರುವ ಸಂತೋಷದಲ್ಲೋ, ಅಥವಾ ಚಿನ್ನದ ಭಾರದಿಂದ ಅವನ ಎದೆಗೂಡಿನಲ್ಲಿ ಉಸಿರು ನಿಂತಿತೋ ಎಂದು ಆಲ್ಡೋನಾದ ಜನ ಇಂದಿಗೂ ಚರ್ಚೆ ಮಾಡುತ್ತಿರುತ್ತಾರೆ.

ಅರುಣನಿಗೆ ಅಸ್ಸಾಂನಲ್ಲಿ ಕೆಲಸ. ಮದುವೆ ಮಾಡ್ಕೊಳ್ಳೋದಕ್ಕೆ ಅಂತ ಬೆಂಗಳೂರಿಗೆ ಬಂದಿದ್ದ. ಬೆಳಗ್ಗೆ ಬಸವನಗುಡಿ ಸಂಜೆ ಸಂಜಯನಗರ ಅಂತ ಬಿಡುವಿಲ್ದೆ ಹೆಣ್ಣುಗಳನ್ನ ನೋಡಿದ್ದಾಯ್ತು. ಕೊನೆಗೆ ಇಂದಿರಾನಗರದ ಇಂದಿರ ಇವನಿಗೆ ಮಾಲೆ ಹಾಕಿದಳು. ಸಮಾರಂಭ ಎಲ್ಲಾ ಮುಗಿದು ನವ ವಧೂವರರು ಅಸ್ಸಾಂನಲ್ಲಿ ಗೌಹಾಟಿಗೆ ಮನೆಗೆ ಬಂದರು ಮನೆಗೆ ಬರುತ್ತಲೇ ಅರುಣ ತನ್ನ ಪ್ರೇಯಸಿಗೆ ಹೇಳಿದ.

"ನೋಡು ಚಿನ್ನಾ ಈ ಕೆಲಸದ ಹುಡುಗ ರಾಮ್‌ಕಿಂಕರ್ ಚೂಟಿ. ಮನೆ ಕೆಲಸಾ ಎಲ್ಲಾ ಬಹಳ ಚೆನ್ನಾಗಿ ಮಾಡ್ತಾನೆ. ನೀನು ಕಿರಿ ಬೆರಳು ಎತ್ತಬೇಕಾಗಿಲ್ಲಾ" ಅಂತೆಲ್ಲಾ ತನ್ನ ಭಂಟನ ಗುಣಗಾನ ಮಾಡ್ದ.

ಅರುಣನಿಗೆ ಮೊದಲನೇ ಪಾಳಿ. ಆರು ಘಂಟೆಗೆ ಎದ್ದು ಕೆಲಸಕ್ಕೆ ಹೋಗಬೇಕಾಗಿತು. "ಚಿನ್ನಾ, ನೀನು ನಿಧಾನವಾಗಿ ಏಳು. ರಾಮು ಟೀಮಾಡಿ ಇಟ್ಟಿರ್‍ತಾನೆ. ಕುಡ್ಕೊಂಡು ಹೋಗ್ತೀನಿ" ಅಂತ ಹೇಳಿ ಅರುಣ ಹೊರಟ.

ಇಂದಿರೆ ಸುಖವಾಗಿ ಏಳು ಘಂಟೆ ತನಕ ಮಲಗಿದ್ದಳು ಏಳು ಘಂಟೆಗೆ ಬಾಗಿಲು ತಟ್ಟಿದ ಶಬ್ದ ಆಯಿತು. ಓಹೋ ರಾಮುಕಿಂಕರ ಟೀ ತಂದಿರ ಬಹುದು ಅಂದ್ಕೊಂಡು "ಕೋನ್ ಹೈ ? ಅಂತ ಬೆಂಗಳೂರ ಹಿಂದೀಲಿ ಕೇಳಿದಳು

"ಮೈ ರಾಮು ಹೂ ಸಾತ್ ಬಜ್ ಗಯಾಹೈ, ಜಲ್ದೀಸೆ ಕಪಡೇ ಪಹನ್ ಕರ್ ತುಂ ಘರ್ ಜಾವೋ" ಅಂತ ರಾಮುನ ಭಂಟ.

29

ಚೌತಿ

ಅರುಣಾ ಆರ್ ಕಾರಂತ

"ಪಾಡ್ಯ-ಯುಗಾದಿ ಪಾಡ್ಯ

ಬಿದಿಗೆ-ಸೋಮನ ಬಿದಿಗೆ

ತದಿಗೆ-ಅಕ್ಷತ್ತದಿಗೆ

ಚೌತಿ-ವಿನಾಯಕ ಚೌತಿ.........

ಎಂದು ಗಟ್ಟಿಯಾಗಿ ಉರು ಹೊಡೆಯುತ್ತಿದ್ದ ನನ್ನ ಮಗಳು ಅಶ್ವಿನಿಗೆ ತಲೆಯಲ್ಲಿ ಇದ್ದಕ್ಕಿದಂತೆ ಮಿಂಚು ಹೊಳೆದಂತಾಯಿತು. ಅವಳು "ಅಮ್ಮಾ ಅಮ್ಮಾ ಚೌತಿ ಯಾವಾಗ, 29 ಕಲ್ಲಾ. ಆ ಸಲ ಊರಲ್ಲಿ ಮಾಡಿದ್ದಾಗೆ ಮುಂಡುಕನ ವಾಲೆಯ ಕಡುಬು ಮಾಡ್ತೀಯಾ ?......ಹೋಳಿಗೆ ಮಾಡಮ್ಮಾ, ಎಂದಳು, ನಾನು ಎಂದಿನಂತೆ ಆಶ್ವಾಸನೆಯಿತ್ತೆ. ಬೆನ್ನಲ್ಲಿಯೇ ಮಗಳ ಬತ್ತಳಿಕೆಯಿಂದ ಇನ್ನೊಂದು ಪ್ರಶ್ನೆ ಹೊರಬಿತ್ತು, ತಿಂಗಳಿಗೆರಡು ಸಲ ಚೌತಿ ಬರ್‍ತದಲ್ಲ ಆವಾಗೆಲ್ಲ ಹಬ್ಬ ಮಾಡಿದ್ರೆ 'ವರ್ಷವಿಡೀ ಹೋಳಿಗೆ, ಚಕ್ಕಲಿ, ಕರ್ಜಿಕಾಯಿ, ಕಡುಬು, ಪಾಯಸ ಎಲ್ಲ ತಿನ್ಬಹುದಿತ್ತು' ಎಂದಳು ಬಾಯಲ್ಲಿ ನೀರೂರಿಸಿಕೊಂಡು.

"ಹೌದೌದು" ಪಂಚಮಿ ಬಂತೂಂದ್ರೆ ಹಬ್ಬ ಮಾಡೊದಿದ್ರೆ ಹಬ್ಬದ ಸಾಲೇ ಇದೇ ಅದರಲ್ಲೂ ಈ ಮಧ್ಯೆ ಬರಗಾಲದಲ್ಲಿ ಅಧಿಕ ಮಾಸ ಎನ್ನುವ ಹಾಗೆ ಚೌತಿ ಬೇರೆ ಹತ್ತಿರ ಬರ್‍ತಾ ಇದೆ. 'ದುಡ್ಡಿದ್ದವರಿಗೆ ಆಸೆ ಹೆಚ್ಚು, ಬಡವರಿಗೆ ಹಸಿವೆ ಹೆಚ್ಚು' ಅಂತ ನಿಮ್ಮಪ್ಪ ಹೇಳ್ತಾರಲ್ಲ. ಎನ್ನುವ ಹಾಗೆ ನಿನಗೆ ಬಯಕೆಗಳ ಸಾಲು ಸಾಲೇ ಪ್ರಟೀತಾ ಇದೆ. ಪೇಟೆಗೊದ್ರೆ ನೂರುಪಾಯ್ಗೆ ಮೂರ್ ಸಾಮಾನ್ ಬರೊದಿಲ್ಲ, ಇನ್ಮೇಲಿಂದ ನಿತ್ಯ ಚೌತಿ ಬೇರೆ ನಿನ್ಗೆ ಎಂದೆ ಅಸಹನೆಯಿಂದ.

ಅಮ್ಮಾ, ಹಾಗಾದ್ರೆ ಹಬ್ಬ ಮಾಡೂದಿಲ್ಲ ಈ ಸಲ ? ಅಂತ ಮತ್ತೆ ಗಂಟು ಬಿದ್ದಳು, ರಚನಾ ಮನೆಯಲ್ಲಿ ನೂರುಪಾಯಿ ಪಟಾಕಿ ತರ್‍ತಾರಂತೆ. ನಮ್ ಕ್ಲಾಸ್ ಮೇಟ್ ವಿಜೇತಾ ಮನೆಯಲ್ಲಿ ಗಣಪತಿನೂ ತರ್‍ತಾರಂತೆ. ಅಮ್ಮಾ, ನಮ್ಮನೆಲೂ ಗಣಪತಿ ತರೋಣ......? ಮನಸ್ಸಲ್ಲೇ ಅಂದ್ಕೊಂಡೆ ಇವ್ಳ ಬಾಯ್ಮುಚ್ಚಿಸ್ದೆ ಇದ್ರೆ ಹೊಸ ಹೊಸ ಡಿಮಾಂಡು ಶುರು ಆಗ್ತದೆ. ನಮ್ಗಿವಾಗ್ಲೆ ಎಳೂಹನ್ನೊಂದಾಗಿದೆ. ತಿಂಗಳ ಕೊನೆ ಯಾಕಾದ್ರೂ ಬರುತ್ತೆ ಅನ್ನಿಸ್ತದೆ. ಅದ್ರಲ್ಲೂ ಈ ಸರತಿ ಚೌತಿ

29ಕ್ಕೆ ಬಂದ್ಬಿಟ್ಟದೆ, ಏನ್ ಹಬ್ಬಾ ಮಾಡೊದೋ ಏನ್ ಪಟಾಕಿ ತರೋದೊ' ಪ್ರಟ್ಟಿ ಇಲ್ಲ್ನೋಡು ಚೌತಿ ಈ 29ಕ್ಕೇ ಯಾಕೆ ಅಂತ ಕೇಳ್ತೀಯಾ ಹೇಳ್ತೀನ್ನೋಡು. ಅದಕ್ಕೊಂದು ಚೆಂದ ಕತೆಯಿದೆ. 'ನೋಡು ಅದೊಂದು ಸಮೃದ್ಧಿ ಕಾಲ ಎಲ್ಲರ ಮನೆಯಲ್ಲಿಯೂ ಎಲ್ಲಾ ಬೇಕಾದಷ್ಟಿತ್ತು. ಜನ್ರಿಗೆ ಬಾಯ್‌ರುಚೀನೂ ಚೆನ್ನಾಗಿತ್ತು. ಹಾಗೆಯೇ ಮಾಡಿ ಹಾಕುವವರಿಗೂ ಉಮೇದಿತ್ತು. ಆಗ ವರ್ಷವಿಡೀ ಹಬ್ಬ. ನೂರೊಂದು ದೇವ್ರು ಹೆಸ್ರಲ್ಲಿ ನೂರೊಂದು ಭಕ್ಷ್ಯ ಮಾಡ್ಕೊಂಡು ತಿನ್ತಾ ಇದ್ರು. ಹೀಗೆ ತಿನ್ತಾ ತಿನ್ತಾ ಇದ್ದ ಹಾಗೆ ಕೈಕಾಲು ಸಣ್ಣದಾಯ್ತು, ತಲೆನೂ ಸಣ್ಣದಾಯ್ತು, ಹೊಟ್ಟೆ ಮಾತ್ರ ದೊಡ್ಡದಾಯ್ತು. ಎಲ್ಲಿ ನೋಡಿದ್ರೂ ಗುಡಾಣದಹೊಟ್ಟೆಯ ಗಣಪತಿಗಳೇ ಕಾಣುತ್ತಿದ್ದರು. ಒಮ್ಮೆ ಕೈಲಾಸದಲ್ಲೇನಾಯ್ತು ಅಂದ್ರೆ...ಪಾರ್ವತಿಯ ಮಗ ಗಣಪತಿ ಇದ್ದಾನಲ್ಲ ಅವನ ಮೂಗಿಗೆ ಭೂಲೋಕದಿಂದ ಎದ್ದು ಬರುವ ಪಂಚ ಭಕ್ಷ್ಯ ಪರಮಾನ್ನದ ಘಮಘಮ ಪರಿಮಳ ಬಡಿಯಿತು. ಪುಟ್ಟ ಗಣಪ ಅಮ್ಮನ ಕಣ್ತಪ್ಪಿಸಿ ಪುಟ್ಟ ಪುಟ್ಟ ಹೆಜ್ಜೆಯಿಡುತ್ತ ಭೂಲೋಕಕ್ಕೆ ಬಂದ. ಸ್ವಲ್ಪ ಹೊತ್ತಿನಲ್ಲಿ ತಾಯಿ ಪಾರ್ವತಿಗೆ ಮಗ ಹತ್ತಿರವಿಲ್ಲದುದು ಗಮನಕ್ಕೆ ಬಂದು ಹುಡುಕಾಡಲಿಕ್ಕೆ ಸುರು ಮಾಡಿದಳು. ಮಗನ ತಿಂಡಿಯ ಚಾಪಲ್ಯ ಗೊತ್ತಿದ್ದ ಪಾರ್ವತಿ ನೇರವಾಗಿ ಭೂಲೋಕಕ್ಕೆ ಬಂದಳು. ಆದರೆ, ಎಲ್ಲಿ ನೋಡಿದರೂ ತನ್ನ ಮಗನಂತೆಯೇ ಇರುವ ಡೊಳ್ಳು ಹೊಟ್ಟೆಯ ಮನುಷ್ಯರೆ ಕಾಣುತ್ತಾ ಇದ್ದುದರಿಂದ ಪುಟ್ಟ ಗಣಪನನ್ನು ಕಂಡು ಹಿಡಿಯುವುದು ಆಕೆಗೂ ಕಷ್ಟವಾಯಿತು. ಆಗ ಪಾರ್ವತಿಯು ಇದಕ್ಕೆ ಕಾರಣ ಯೋಚಿಸಿದಾಗ ಇದು ಸಮೃದ್ಧಿಯಿಂದುಂಟಾದ ಅಲಸ್ಯದ ಪರಿಣಾಮ ಎಂದು ಆಕೆಗೆ ಹೊಳೆಯಿತು. ಆಗ ಆಕೆಯು ಇನ್ನು ಮೇಲೆ ಭೂಲೋಕದಲ್ಲಿ ನಿಯಮಿತವಾಗಿ ಹಬ್ಬವನ್ನು ಮಾಡುವಂತವರಾಗಿ ; ಎಂದು ಸಾಕ್ಷಾತ್ ಅನ್ನಪೂರ್ಣೇಶ್ವರಿಯಾದ ಪಾರ್ವತಿಯು ಹರಸಿದಳು. ಹಾಗಾಗಿ ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿಯಂದು ಮಾತ್ರ ವಿನಾಯಕ ಚೌತಿಯನ್ನು ಆಚರಿಸುವುದು' ಎಂದು ಕಥೆ ಮುಗಿಸಿದ. ಆದ್ರೆ ಇದನ್ನು ಕೇಳ್ತಾ ಇದ್ದ ನಮ್ಮವರು ಹೊಸದೊಂದು ಕಥೆ ಹೇಳಿದ್ರು, 'ಹಾಗಲ್ಲ ಕಣೆ ಹಾಲು ಲೀಟರಿಗೆ 2ರೂ ಶೇಂಗಾಎಣ್ಣೆ 45ರೂ...... ವಿಷ ಏರಿದಂತೆ ಎಲ್ಲ ಸಾಮಾನುಗಳ ಬೆಲೆ (ಮನುಷ್ಯನ ಹೊರತಾಗಿ) ಏರ್ತಾ ಇದೆ. ಹೀಗಿರುವಾಗ ನಮ್ಮಂತೋರು ಬದುಕೋದು ಹೇಗೆ ನೋಡು, ಹಾಗಾಗಿ ನಮ್ಮಂತಹ ಸಂಬಳಿಗರೆಲ್ಲ ಒಟ್ಟಾಗಿ ನೇರವಾಗಿ ಆ ಬ್ರಹ್ಮನತ್ರ ಹೋಗಿ 'ನಮ್ಮನ್ನ ಹುಟ್ಸಿದ್ರೇವು ಹುಲ್ಲು ಮೇಯ್ಸಲ್ಲ ಅಂತಾರೆ ಹಾಗಂತ ಇಲ್ಲೀವರೆಗೆ ಅನ್ನವೊ ಗಂಜಿಯೋ ತಿಂದು ಬದುಕ್ತಿದ ನಮಗೆ ಹುಲ್ಲು ತಿನ್ಸುವ ಹಾಗೆ ಮಾಡ್ಬೇಡಾ ಬದ್ಲಿಗೆ ಈಗೆ ಇದ್ದಾಗೆ ಆದ್ರೂ ಇರುವಂತೆ ಇರಲಿಕ್ಕಾಗಿ ದಯವಿಟ್ಟು ಈ ಹಬ್ಬಗಳ ಹಾವಳಿಯಿಂದ ನಮನ್ನು ಮುಕ್ತಗೊಳಿಸು ಎಂದು ಗೋಗರೆದ್ರು, ಬ್ರಹ್ಮ 'ತಥಾಸ್ತು' ಅಂದ. ಮತ್ತೆ ಜೊತೆಯಲ್ಲಿ ಹಬ್ಬಗಳ Schedule ಕಳ್ಸಿಕೊಟ್ಟ, ಆವತ್ನಿಂದ ಹಬ್ಬಗಳ ಸಂಖ್ಯೆ ತಗ್ಗಿದೆ ಹರಟೆ ಕೇಳ್ತಾ ತೂಕಡಿಸುತ್ತಿದ್ದ ಮಗಳು ನೀವಿಬ್ರೂ ಸುಳ್ಳು ಹೇಳ್ತಾ ಇದ್ದಿರಿ ಎಂದು ಕೈ ತಟ್ಟಿದಳು.

ವಿಶ್ವಾಸಾನಂದ

ನಾಗಶ್ರೀ ಸೂರಿ

ಬೆಂಗಳೂರಿನಲ್ಲಿ ಜ್ಞಾನಯಜ್ಞ ಮಾಡತೀವಿ ಅಂತ ಬರೋ ಈ ಸತ್ಯಾನಂದ, ಮಿಥ್ಯಾನಂದ, ಪಥ್ಯಾನಂದ ಅನ್ನೋ ಸ್ವಾಮಿಜೀಗಳ ಪ್ರೋಗ್ರಾಮುಗಳನ್ನೆಲ್ಲ cover ಮಾಡೋಕ್ಕೆ ಸಾಮಾನ್ಯವಾಗಿ ನನ್ನನ್ನೇ ಕಳಿಸತಾ ಇರತಾರೆ, ನಮ್ಮ ಸಂಪಾದಕರು. ಒಂದು ಸಲ ಸರಿ, ಎರಡು ಸಲ ಸರಿ, ಆದರೆ ಕಾಲಕ್ಕೂ ಹೀಗೇ ಇದ್ರೆ ಹ್ಯಾಗೇ ? ಅದೇ ಮುದಿ ಸ್ವಾಮಿಜೀಗಳು, ಅದೇ ಉಪನಿಷತ್ತು, ಅದೇ ವೇದಾಂತ ಅದನ್ನ ಕೇಳೋಕ್ಕೆ ಅದೇ ಗುಂಪು ರಿಟೈರಾದ ಸರ್ಕಾರಿ ಅಧಿಕಾರಿಗಳು—ಥತ್, ಯಾರಿಗೆಬೇಕು !

ಆದರೆ ಒಂದು ತಿಂಗಳು ಪ್ರೋಗ್ರಾಂ ನಡಸಿ ಮೊನ್ನೆ ಉತ್ತರ ದೇಶಕ್ಕೆವಾಪಸು ಹೋದರಲ್ಲ ಆ ಸ್ವಾಮಿ ವಿಶ್ವಾಸಾನಂದ ಅನ್ನೋರು, ಅವರ ವ್ಯಾಪಾರಾನೆ ಬೇರೆ. ಕಾವಿ ಹಾಕಿಕೊಂಡಿದ್ದಾರೆ, ಹಾಗಾಗಿ ಸನ್ಯಾಸಿಗಳು ಅಂತ ಹೇಳಬಹುದೇ ಹೊರತು, ಅದೇ ಅವರು ಕುರ್ತಾ ಪಾಯಿಜಾಮ ಅಂತ ಹಾಕಿಕೊಂಡು ಹೊರಟ್ಟಿದ್ದರೂ ಅಂದ್ರೆ ಊರಲ್ಲಿರೋ ಹುಡುಗೀರೆಲ್ಲ ಅವರ ಮೈ ಮೇಲೆ ಬಿದ್ದಿರೋರು, ಯಾರೊ ಫಿಲಂ ಸ್ಟಾರ್ ಇರಬಹುದು ಅಂದುಕೊಂಡು-ಅಷ್ಟು ಚೆನ್ನಾಗಿ ಇದ್ದರು. ಹಾಗಾಗಿ ಅವರ ಪ್ರೋಗ್ರಾಂನಲ್ಲಿ ಕೇಳಬೇಕೆ ; ಊರಲ್ಲಿನ ಅರ್ಧ ಜನ ಪುನುಗಿನ ಬೆಕ್ಕುಗಳು ಅಲ್ಲಿ ಹಾಜರು, ಎಲ್ಲೂ ಇಲ್ಲದ ಶೋಕಿ ಮಾಡಿಕೊಂಡು. ಮತ್ತೆ ಅವರುಗಳನ್ನ ನೋಡೊಕ್ಕೆ ಒಂದು ಬಂಡಿ ಪಡ್ಡೆ ಹುಡುಗರು. ಹೀಗಾಗಿ ಹಾಲಿನಲ್ಲಿ ಕಾಲು ಇಡೋಕ್ಕೆ ಆಗೋಲ್ಲ ಹಾಗಿರತ್ತಾ ಇರುತಿತ್ತು.

ಅವರ ಮಾತೂ ಅಷ್ಟೇನೆ. ಕೇಳುತಾ ಇದ್ದರೆ ಇನ್ನೂ ಕೇಳಲಿ, ಕೇಳಲಿ ಅನ್ನಿಸತಾ ಇರೋದು. ಅವರ ಪ್ರಕಾರ ಬದುಕಿನಲ್ಲಿ ಎಂದಾದ್ರೂ ನಮಗೆ ಇಷ್ಟವಾಗದ್ದು ಏನಾದ್ರೂ ಆದರೆ "ಅಯ್ಯೋ ಎಂಥಾ ಅನ್ಯಾಯ !" ಅಂತ ಕೂತುಕೊಳ್ಳೋದು ಅಥವಾ ಆತ್ಮ ಹತ್ಯೆಗೇ ಅಂತ ಭಾವಿ ಹುಡುಕಿಕೊಂಡು ಹೋಗೋದು ತಪ್ಪಂತೆ. ಬದಲಾಗಿ "ಹಯ್ಯೋ, ಅಷ್ಟೇತಾನೆ ! ಅದು ಇನ್ನೂ ಗಬ್ಬು ಎದ್ದು ಹೋಗಬಹುದಾಗಿತ್ತು" ಅಂತ ಅಂದುಕೋತಿರಬೇಕಂತೆ. ಪೌರುಷ ಅಂದರೆ ಅದೇ ಅಂತೆ, ಬರೀ ಮೀಸೆ ಇಟ್ಟುಕೊಂಡು ತಿರಗೋದು ಅಲ್ಲವಂತೆ.

"ಅದು ಹ್ಯಾಗೆ ಸಾಧ್ಯ ಸ್ವಾಮಿಜೀ ನಮ್ಮಂಥ ಜನಗಳಿಗೆ ?" ಅಂತ ಕೇಳಿದೋರು ಬಹಳ ಜನ. ಅವರುಗಳು ಹೇಳಿದ ಕಥೆಗಳನ್ನ ಕೇಳಿದರೆ ಅವರು ಇನ್ನೂ ಬದುಕಿದ್ದಾರಲ್ಲ ಅಂತ ಆಶ್ಚರ್ಯವಾಗುತಿತ್ತು. ಯಾರಿಗಾದರೂ. ಆದರೆ ಸ್ವಾಮಿಜೀ ಪ್ರತಿಕ್ರಿಯೆ ಏನು ?

"ಏನೋ ಆಗಿದೆ ಅನ್ನೋದು ಸತ್ಯ, fact, ಒಪ್ಪಿಕೋತೀನಿ. ಆದರೆ ಆದನ್ನು ದುರಂತ ಅನ್ನೊದು ಕೇವಲ ಅಭಿಪ್ರಾಯ ಅಷ್ಟೆ". ಅಂತ ಶುರುಮಾಡಿದವರು ಒಬ್ಬೊಬ್ಬರ ಕೇಸನ್ನೂ thread-bare analyse ಮಾಡಿ ಸಮಾಧಾನ ಹೇಳತಿದ್ರು.

ಹಾಗಾದ್ರೆ ಈ ಸ್ವಾಮಿಜೀ ಯಾವತ್ತೂ ಯಾವುದಕ್ಕೂ "ಛೆ, ಎಂಥಾ ಅನ್ಯಾಯ. ಹೀಗಾಗ ಬಾರದಾಗಿತ್ತು." ಅಂತ ಹೇಳಿದೋರೇ ಅಲ್ಲವೆ ? –ಈ ನನ್ನ ಅನುಮಾನ ಅಲ್ಲಿಗೇ ಬರತಿದ್ದರಲ್ಲ ಆ "ವಾನ ಪ್ರಸ್ಥ" ಪೇಪರಿನೋರು ಮೂರ್ತಿರಾಯರು, ಅವರ ಹತ್ತಿರ ಎಷ್ಟೋ ಸಲ ಹೇಳಿಕೋತಾ ಇದ್ದೆ.

ಅವರೂ ಅಷ್ಟೆ, "ಹೌದಲ್ಲ ಸೂರಿಯುವರೇ ! ಹ್ಯಾಗಾದರೂ ಮಾಡಿ ಆಸಾಮಿ ಊರು ಬಿಡೊಕ್ಕೆ ಮುಂಚೆ ಒಂದು ಸಲ ಅವರ ಬಾಯಲ್ಲಿ ಈ ಮಾತು ಬರಿಸ ಬೇಕಲ್ಲ." ಅಂತ ಹೇಳತಾ ಇರೋರು.

ಇನ್ನೇನು ನಾಳೆ ಸ್ವಾಮಿಜಿ ಉತ್ತರ ದೇಶಕ್ಕೆವಾಪಸು ಹೋಗಿ ಬಿಡುತಾರೆ ಅಂತಿರೋವಾಗ ಒಂದು ದಿನ ಬೆಳ್ಳಿಗ್ಗೆ ಬೆಳಿಗ್ಗೇನೆ ಮೂರ್ತಿ ರಾಯರು ನಮ್ಮ ಮನೆಗೆ ಓಡಿಕೊಂಡು ಬಂದರು. ತುಂಬಾನೆ excite ಆಗಿದ್ರು.

"ರ್‍ಮ ರ್‍ಮ ಡಾ, ಸೂರಿಯುವರೆ ! ಈವತ್ತು ನಾನು ಹೇಳೋ ಸಮಾಚಾರ ಕೇಳಿದ ಮೇಲೆ ಸ್ವಾಮಿಜಿ 'ಎಂಥಾ ಅನ್ಯಾಯ' ಅಂತ ಹೇಳದೇ ಇದ್ರೇ ಕೇಳಿ...... ಉಹುಂ ಇಲ್ಲಿ ಬೇಡ, ಅಲ್ಲೇ ಅವರ ಎದುರಿಗೇ ಕೇಳೋರಂತೆ ?"

ನಾವು ಹೋಗೋ ಹೊತ್ತಿಗೆ ಸ್ವಾಮಿಜಿ ತಿಂಡಿ ಕಾಫಿ ಮುಗಿಸಿ ಆವತ್ತಿನ ಪ್ರೋಗ್ರಾಂಗೇ ಸಿದ್ಧ ಆಗತಾ ಇದ್ರು.

"ಓಹೊ ಚಿತ್ರಗುಪ್ತರು ಇಬ್ಬರದ್ದೂ ಬೆಳಿಗ್ಗೆ ಬೇಳಿಗ್ಗೇನೆ ಸವಾರಿ ಚಿತ್ತೈಸಿದೆ... ಏನೋ ವಿಶೇಷ ಇರಬೇಕು, ಹೇಳಿ"

"ನಿನ್ನೆ ರಾತ್ರಿ,......ಸ್ವಾಮಿಜೀ ಎಂಥಾ ಅನಾಹುತ ನಡೆದು ಹೋಯಿತು ಅಂತೀರಿ......

"ಏನೋ ಆಯಿತು ಅನ್ನೋದು fact ಇರಬಹುದು, ಒಪ್ಪತೀನಿ. ಆದರೆ ಅದನ್ನ ಅನಾಹುತ ಅನ್ನೋದು ನಿಮ್ಮ ಅಭಿಪ್ರಾಯ ಅಷ್ಟೆ......ಆಯಿತು, ಮುಂದೆ ಹೇಳಿ."

"ನಿಮ್ಮ ಪ್ರೋಗ್ರಾಂಗೆ ಬರತಾ ಇದ್ದರಲ್ಲ, ಆ ಸಾಧನಾ ಮಿೂರ್ ಚಂದಾನಿ..."

"ಯಾರು ? ಅದೇ, ಅವರ ಯಜಮಾನರು ಯಾವುದೋ export house ನಲ್ಲಿ ಮ್ಯಾನೇಜರ್, businessಮೇಲೆ ಎರಡು ವಾರದ ಕೆಳಗೆ ಸಿಂಗಪೂರ್‌ಗೆ ಹೋದರಲ್ಲ ಆಕೇನಾ ?"

"ಹೌದು, ಅವರೇನೆ. ಮಿೂರ್ ಚಂದಾನಿಯವರ ಪ್ರೋಗ್ರಾಂ ಪ್ರಕಾರ ಈ ತಿಂಗಳ ಕೊನೇ ತನಕ ವಾಪಸು ಬರೋದು ಇರಲಿಲ್ಲವಂತೆ. ಆದರೆ ಅದು ಹ್ಯಾಗೋ ಕೆಲಸ ಬೇಗ ಮುಗಿದು ಹೋಯಿತು ಅಂತ ಆಗಿ ಅವರು ನಿನ್ನೆ ರಾತ್ರೀನೆ ಬೆಂಗಳೂರಿಗೆ ಬಂದು ಬಿಟ್ಟರಂತೆ. ಏನು ಟೇಲಿಫೋನು ಮಾಡೋದು, ಒಂದು surprise ಕೊಡೋಣ ಅಂತ ಅಂದುಕೊಂಡು ಅವರು ಬಾಗಿಲು ತೆಗೆದು ಬಂದು ನೋಡಿದ್ರೆ..."

"ಏನಾಯಿತಂತೆ ?" ಯಾಕೋ ಸ್ವಾಮಿಜೀ ಸ್ವಲ್ಪ ಗಾಬರಿಯಾದ ಹಾಗೆ ಕಾಣಿಸಿದ್ರು.

"ನೋಡಿದ್ರೆ, ಮಿಸೆಸ್ ಮಿೂರ್ ಚಂದಾನಿ ನಿಮ್ಮ ಪರಿವಾರದ ಬ್ರಹ್ಮಚಾರಿ ಸಿಯಾರಾಮ್ ಜತೇನಲ್ಲಿ ಚಕ್ಕಂದ ಆಡತಾ ಇದ್ದರಂತೆ-ಸರಿ ಮಿೂರ್ ಚಂದಾನಿಯವರಿಗೆ ಸಿಟ್ಟು ಬಂದು ಅಲ್ಲೇ ಮೂಲೇನಲ್ಲಿ ಇದ್ದ BULLWORKER ನ ಎತ್ತಿ ಕೊಂಡು ಇಬ್ಬರಿಗೂ ತಲೆ ಮೇಲೆ ಚಚ್ಚಿ ಕೊಂದರಂತೆ-ಆ ಮೇಲೆ ಅವರೂನು ಮ್ಯೆ

ಮೇಲೆ ಸೀಮೆ ಎಣ್ಣೆ ಸುರಕೊಂಡು Suicide ಮಾಡಿಕೊಂಡು ಬಿಟ್ಟರಂತೆ-ಛೆ, ಎಂಥಾ ಅನ್ಯಾಯ, ಸ್ವಾಮಿಜೀ ಅದೂ ನೀವು ಊರ ಬಿಡತೀರೋ ಈ ಟೈಂನಲ್ಲಿ..."

ಒಂದು ನಿಮಿಷ ಸ್ವಾಮಿಜೀ ಹಾಗೇ ಕಣ್ಣು ಮುಚ್ಚಿಕೊಂಡು ಅಂತರ್ಮುಖಿ ರಾದರು. ಆ ಮೇಲೆ ನಿಧಾನವಾಗಿ ಕಣ್ಣು ಬಿಟ್ಟು, ಮಾಮೂಲು ಮಂದಹಾಸ ದಿಂದಲೇ ಹೇಳಿದರು.

"ಒಪ್ಪಿಕೊಂಡೆ, ನಮಗೆ ತಿಳಿದವರು ಮೂರು ಜನ ಹೀಗೆ ಒಂದೇ ಸಲ ಸತ್ತಿದ್ದಾರೆ. ಆದರೆ, ಪುಣ್ಯಕ್ಕೆ ಅಷ್ಟೇ ಆಯಿತಲ್ಲ, ಇನ್ನೂ ಗಬ್ಬು ಎದ್ದು ಹೋಗ ಲಿಲ್ಲವಲ್ಲ"

"ಎಂಥಾ, ಮಾತು ಸ್ವಾಮೀಜೀ ? ಅಲ್ಲಿ ಮೂರು ಹೆಣಾ ಬಿದ್ದಿದೆ...... ಇನ್ನೂ ಏನಾಗಬೇಕಾಗಿತ್ತು ಅಂತೀರಿ, ನಿಮ್ಮ ಲೆಕ್ಕದಲ್ಲಿ...... ?

"ಉದ್ರೇಕ ಬೇಡಿ ಮಿಸ್ಟರ್ ರಾವ್ COOL ಆಗಿ ಯೋಚನೆ ಮಾಡಿ ನೋಡಿ ನಿಮಗೇ ಗೊತ್ತಾಗತ್ತೆ. ಈ ಮಿಠರ್ ಚಂದಾನಿ ಇದ್ದಕ್ಕಿದ್ದ ಹಾಗೆ ನಿನ್ನೆ ರಾತ್ರಿ ವಾಪಸು ಬಂದರು...ಹಾಗಾಗಿ ನೀವು ಅನಾಹುತ ಅಂತ ತಿಳಿದಿರೋ ಈ ಪ್ರಸಂಗ ನಡೆದು ಹೋಗಿದೆ. ಅದರೆ ಅದೇ ಅವರು ಮೊನ್ನೆ ರಾತ್ರೀನೆ ಏನಾದ್ರೂ ಬಂದು ಗಿಂದು ಬಿಟ್ಟಿದಿದ್ರೆ, ಇನ್ನೂ ಗಬ್ಬು ಎದ್ದು ಹೋಗಬಹುದಾಗಿತು......"

"ಅಂದರೆ......?"

"ಅವತ್ತಿನ ದಿನ ರಾತ್ರಿ ಸಾಧನಾ ಜತೆಗೆ...ನಾನು ಇದ್ದೆ"

ಒಂದು Confession. ಸುಮಾರು ಮುವತ್ತೈದು ವರ್ಷಗಳ ಓಂದೆ ILLUSTRATED WEEKLYನಲ್ಲಿ ಒಂದು ಜೋಕು ಓದಿದ್ದೆ. ಅದನ್ನು ಕದ್ದು ಈಗ ಇಲ್ಲಿ ಬರದಿದ್ದೀನಿ. Original Joke ನ್ನ ಜ್ಞಾಪಿಸಿಕೊಂಡೋರು ನನ್ನನ್ನ ಬಯ್ಯಬೇಡಿ

ಯಾಕೊಲ್ಲೆ ಮಗಳೇ ಸಣ್ಣಕ್ಕಿ ಬೋನ

ಶಿವು

ಮೊನ್ನೆ ಸಂಜೆ ಪ್ರಭು ಬಂದು "ಬಾಗೂರು ಚಂದ್ರು ಅವರು ಒಂದು ಹೊಸ ಪುಸ್ತಕ ಬರೆದಿದ್ದಾರೆ" ಅಂತ ಹೇಳಿದರು." ನಗೆ ಬರಹಗಳ ಸಂಕಲನ ಇದು" ಅಂತಲೂ ಸೇರಿಸಿ, ಪುಸ್ತಕದ ಒಂದು ಪ್ರತಿಯನ್ನು ನನ್ನ ಕೈಗಿಟ್ಟರು.

ನಾನು "ಅಯ್ಯೋ ಪಾಪ ! ಯಾಕೆ Could he not have avoided it ?" ಅಂತ ಅತ್ಯಂತ ಸಹಾನುಭೂತಿಯಿಂದ ಕೇಳಿದೆ.

ಪ್ರಭು "ಇಲ್ಲಾ ಶಿವಕುಮಾರ್, ವಿಧಿ ಲಿಖಿತ ಹಾಗಿತು" ಅಂತ ಗಂಭೀರವಾಗಿ ಹೇಳಿ ವಿದಾಯ ಕೋರಿ ಹೊರಟರು.

ಕನ್ನಡ ಪುಸ್ತಕಗಳ ಮುದ್ರಣ, ಪ್ರಕಾಶನ, ಮಾರಾಟ (ಮಾರಾಟವೆಲ್ಲಿ ಬಂತು! ವಿತರಣೆ-ಮುಫತ್ತು ವಿತರಣೆ) ಇವುಗಳೆಲ್ಲದರ ದಾರುಣ ಚಿತ್ರವನ್ನು ಮತ್ತೆ ಮತ್ತೆ ಕಾಣುವ ಸುಯೋಗ ಪಡೆದಿದ್ದ ನನಗೆ, ಬಾಗೂರರ ಈ ಪ್ರಚಂಡ ಸಾಹಸವನ್ನು ನೋಡಿ, ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಾಯಿತು.

ಕೈಲಿದ್ದ ಪುಸ್ತಕವನ್ನು ಹಾಗೇ ತಿರುವಿದೆ. ಹಿಂದಿನ ಪುಟದ ಬ್ಲರ್ಬ್ ಅನ್ನು ಲೇಖಕರೇ ಬರೆದಿದ್ದಂತೆ ಕಾಣಿಸಿತು. ನಮ್ಮ ತುತ್ತೂರಿ ನಾವೇ ಊದುವ ಮಾತು ಕೇಳಿದ್ದೆ, ನಮ್ಮ ಚಂದ್ರಶೇಖರ್ ಹಾಗಿಲ್ಲವಲ್ಲಾ. ಇದೇನೋ ಯಾರೋ ಅವರ ಮುಖಕ್ಕೆ ಮಸಿ ಬಳಿಯುವ ಮಸಲತ್ತು ಮಾಡಿರಬೇಕು ಅಂದುಕೊಳ್ಳುತ್ತಲೇ ಒಳಗಿನ ಪುಟ ನೋಡಿದೆ. ನನ್ನ ಊಹೆ ನಿಜವಾಗಿತ್ತು. ಕರಡು ಓದುಗ. ಲೇಖಕರ ಹೆಸರನ್ನು ಮೇಲೆ ಅಳವಡಿಸುವ ಬದಲು, ಬ್ಲರ್ಬ್‌ನ ಕೆಳಗೆ ಅಳವಡಿಸಿದ್ದ ಅಷ್ಟೇ. ಈ ಒಂದು ಸಣ್ಣ ಅಚಾತುರ್ಯದಿಂದ, ಮೃದು ಮನಸ್ಸಿನ ಲೇಖಕರ ಮನಸ್ಸಿನ ಮೇಲೆ ಆಗುವ ಆಘಾತವನ್ನು ಆತ ಓದುಗರ ಊಹೆಗೇ ಬಿಟ್ಟಿದ್ದ.

"ಹತ್ತು-ಮತ್ತೊಂದು" ಬಿ. ಎಸ್. ಚಂದ್ರಶೇಖರ್ ಅವರ ಎರಡನೆಯ

ನಗೆ ಸಂಕಲನ ಇವರ ಮೊದಲ ನಗೆ ಸಂಕಲನ "ಮದುವೆಯ ಉಡುಗೆರೆ" ಗೆ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ ದೊರಕಿತ್ತು. ಚಂದ್ರಶೇಖರ್ ಅವರ ಲೇಖನಗಳನ್ನು ಓದುವುದೆಂದರೆ ಅದೊಂದು ಅಪೂರ್ವ ಅನುಭವ. ಹಲವು ಲೇಖನ ಗಳು ಒಮ್ಮೆಲೇ ನಿಮ್ಮನ್ನು ಬಾಲ್ಯದ ನಾಸ್ಟಾಲ್ಜಿಯಾ ಲೋಕಕ್ಕೆ ಕರೆದೊಯ್ದರೆ ಇನ್ನು ಹಲವು ಲೇಖನಗಳು ದಿನನಿತ್ಯದ ಗೋಳುಗಳನ್ನು ವಾರೆಗಣ್ಣಿನಿಂದ ನೋಡಿ ನಗುವ ಕಲೆಯನ್ನು ನಿದರ್ಶಿಸುತ್ತವೆ. ನಲವತ್ತರ ದಶಕದ ಅಡಿಗೆ ಮನೆಯನ್ನು ನೋಡಬೇಕೇ ? ಬಾಗೂರರ ಕ್ವಿಕ್ ಟೂರ್ ಸೇರಿಕೊಳ್ಳಿ, ಮಾಡಿನ ಹಂಚಿನ ಮಧ್ಯೆ ಇರುವ ಬೆಳಕಿನ ಕಿಂಡಿಯಿಂದ ಹರಿದಿರುವ ಬಿಸಿಲುಕೋಲಿನ ಬೆಳಕಿನಲ್ಲಿ, ಅರಕನ ಚಿಟ್ಟಿ, ಕಲ್ಲೊಣರೆ, ಅನ್ನದ ಕಂಚು, ಹಿತ್ತಾಳೆ ಲೋಟಗಳು ಇತ್ಯಾದಿ ಎಲ್ಲಾ ಕನ್ನಡದ ಸಾಮಾನುಗಳೇ. ಈಗಿನ ಕಿಚನ್‌ಗಳಲ್ಲಿ ಕಂಡು ಬರುವ ಪ್ರೆಷರ್ ಕುಕ್ಕರ್, ಪರ್ಲ್ ಪಟ್ ಜಾರ್ ಹೀಗೆ ಇಂಗ್ಲೀಷ್ ರಾಜ್ಯ ಭಾರವಿರಲಿಲ್ಲ ಅನ್ನುತ್ತಾರೆ ಬಾಗೂರು. ತೃಣಮಪಿ ನಚಲತಿ ಮಾತಿನ ಅರ್ಥ ಇಲ್ಲಿ ನೋಡಿ, ಲೇಖಕರಿಗೆ ದೆಹಲಿಗೆ ವರ್ಗವಾಗು ತ್ತದೆ. ಬೆಂಗಳೂರಿನಲ್ಲಿ ಪ್ಯಾಕ್ ಮಾಡಿದ ಮನೆಸಾಮಾನುಗಳನ್ನು ದೆಹಲಿಯ ಹೊಸ ಮನೆಯಲ್ಲಿ ಬಿಚ್ಚಿ ಜೋಡಿಸಿದ ನಂತರ ಉಳಿಯುವ ಏಕೈಕ ವಸ್ತುವೆಂದರೆ, ಒಂದು ಬಣವೆ ಹುಲ್ಲು, ಈ ಒಣಗಿದ ಬೆಂಗಳೂರು ಹುಲ್ಲನ್ನು ದೆಹಲಿಯಲ್ಲಿ ವಿಲೇವಾರಿ ಮಾಡಲು ಲೇಖಕರು ಪಟ್ಟಮಾಡು ಅಪ್ಪಿಷ್ಟಿಲ್ಲ. ಕೊನೆಗೆ ಭಗವಂತ, ಫ್ಲಾಟ್‌ನ ವಾಚ್‌ಮನ್ ರೂಪದಲ್ಲಿ ಪ್ರತ್ಯಕ್ಷನಾಗಿ ತೃಣವನ್ನು ಚಲಿಸುವಂತೆ ಮಾಡುತ್ತಾನೆ. ಕಾಗದದ ಪೊಟ್ಟಣ ಬಳಸಿ, ಅರಣ್ಯನಾಶಮಾಡುವ, ಅಥವಾ ಪ್ಲಾಸ್ಟಿಕ್ ಚೀಲ ಬಳಸಿ ಪರಿಸರ ವಿನಾಶಕ್ಕೆ ಕಾರಣವಾಗುವ ಬದಲು ದೊಗಳೆ ಷರಟಿನ ಮಡಿಲಿನಲ್ಲಿ ದಿನಸಿ ತುಂಬಿಸಿಕೊಂಡು ಬರುತ್ತಿದ್ದ ದಿನಗಳನ್ನು ನೆನಪಿಸಿಕೊಳ್ಳಬೇಕಾದರೆ, ಬಾಗೂರು ಚಂದ್ರು ಅವರ ವಾರೆಗಣ್ಣಿನ ನಗೆ ದೃಷ್ಟಿ ಅತ್ಯಗತ್ಯ.

ಈ ಪುಸ್ತಕದ ಲೇಖನಗಳನ್ನೆಲ್ಲಾ ಒಂದೇ ಸಿಟ್ಟಿಂಗ್‌ನಲ್ಲಿ ಓದಿಮುಗಿಸಿದೆ. ಮುಗಿಸಿದ ಮೇಲೆ, ಹೀಗೆ ಓದುವ ಬದಲು, ಊಟದ ನಂತರ ಹುರಿಗಾಳು ಮೆಲ್ಲು ವಂತೆ ಆಗಾಗ ಹಲವು ಲೇಖನಗಳನ್ನು ಓದಿದರೆ, ರಸಾನುಭವ ಇನ್ನೂ ಚೆನ್ನಾಗಿರ ಬಹುದು ಎನ್ನಿಸಿತು. ಇನ್ನೊಂದು ವಿಷಯ, ನಗೆ ಲೇಖನಗಳು ಲೇಖಕನ ಹಾಸ್ಯ ಪ್ರಜ್ಞೆಯನ್ನು ಹರಿತ ಗೊಳಿಸುವುದಂತೂ ನಿಜ, ಆದರೆ ಹೀಗೆ ಚೂಪುಗೊಳಿಸಿದ ಬರಹದ ಶೈಲಿಯನ್ನು ಬಳಸಿ, ಯಾವುದಾದರೂ ಉಪಯುಕ್ತ ವಿಷಯವನ್ನು ತಿಳಿಸು ವಂತಾದರೆ ಎಷ್ಟು ಚೆನ್ನ ಅನ್ನಿಸುತ್ತದೆ. ಇದೇ ಲೇಖಕರು ಸಮೂಹ ಮಧ್ಯಮಗಳ

ಮೇಲೆ ಒಂದು ಪ್ರೌಢಗ್ರಂಥವನ್ನು ಬರೆದಿದ್ದಾರಂತೆ ಸಮೂಹ ಮಾಧ್ಯಮಗಳ ಬಗ್ಗೆ ಏನೇನೂ ತಿಳಿಯದ, ಆದರೆ ತಿಳಿದುಕೊಳ್ಳಲು ಉತ್ಸುಕನಾದ ಓದುಗನಿಗೆ, ಈ ರೀತಿಯ ಲಘು ಶೈಲಿಯಲ್ಲಿ ಆ ವಿಷಯದ ಬಗ್ಗೆ ತಿಳಿಯ ಹೇಳಿದರೆ, ಒಂದೇ ಕಲ್ಲಿನಿಂದ ಎರಡು ಹಕ್ಕಿಗಳನ್ನು ಹೊಡೆದಂತಾಗುತ್ತದಲ್ಲವೇ. ಬಾಗೂರು ಚಂದ್ರು ಅವರ ಮುಂದಿನ ಪುಸ್ತಕಗಳು ಈ ನಿಟ್ಟಿನಲ್ಲಿ ಹೊರಬರುವುವೆಂದು ಪ್ರಾಮಾಣಿಕವಾಗಿ ಆಶಿಸುವೆ.

ಕೊನೆಯದಾಗಿ, ಈ ಲೇಖನದ ಹೆಡ್ಡಿಂಗ್ ಬಗ್ಗೆ, ಈ ಪುಸ್ತಕದ ಕೊನೆಯ ಲೇಖನವೊಂದರಲ್ಲಿ ಲೇಖಕರು ಈ ಗಾದೆಯ ಮಾತನ್ನು ಬಳಸಿದ್ದಾರೆ. ಅದನ್ನು ಓದಿದ ತಕ್ಷಣ ನಮ್ಮ ಕನ್ನಡ ಜಾನಪದ ಗಾದೆಗಳ ಸಿರಿಕಂಪು ಅರಿವಿಗೆ ಬಂತು. ಆದಿರಲಿ, ಸಣ್ಣಕ್ಕಿ ಬೋನವನ್ನು ಮಗಳು ಯಾಕೆ ಬೇಡ ಅಂದಳು ಎಂಬ ಪ್ರಶ್ನೆ ಬಗೆ ಹರಿಯದೆ, ಚಿಂತೆಯಿಂದ ಕುಗ್ಗಿರುವ ಓದುಗರಿಗೆ ಉತ್ತರ ಹೇಳಿಬಿಡುತ್ತೇನೆ. ಇಲ್ಲದ್ದಕ್ಕೆ ಒಲ್ಲೆ ಎಂದಳಂತೆ.

ಅಮೃತ ಕಲಶ

ಕೋಟ್ಯಾಂತರ ವರ್ಷಗಳ ಹಿಂದೆ ಸಮುದ್ರಾನ ಕಡೆದ್ರಲ್ಲಾ, ದೇವತೆಗಳೂ, ರಾಕ್ಷಸರೂ ಸೇರ್ಕೊಂಡು - ಆ ಕಥೆ ಜ್ಞಾಪ್ಕ ಇದೆ ತಾನೆ. ಆಗ ಹಾಲ ಹಲ ಹುಟ್ಟಿದ್ಮೇಲೆ, ಕೊನೆಗೆ ಅಮೃತ ಬಂತಲ್ಲಾ. ಅದನ್ನ ಎನ್ರಾನ್ ನ್ಯಾಯ ಮಾಡಿ ದೇವತೆಗಳು ಹಾರಿಸ್ಕೊಂಡು ಹೋಗಿದ್ದು ಗೊತ್ತಿರ್ಬೇಕಲ್ವೇ. ಆ ಅಮೃತ ಕಲಶ ಆವಾಗ್ನಿಂದ ಮೊನ್ನೆ ಮೊನ್ನೆ ವರ್ಗೂ ದೇವತೆಗಳ ಸುಪರ್ದಿನಲ್ಲೇ ಇತ್ತು, ಬೇಕಾದಾಗೆಲ್ಲಾ ಅದರಿಂದ ಗುಟುಕು ಹೀರ್ತಾ ದೇವತೆಗಳೆಲ್ಲಾ ಸುಖವಾಗಿದ್ರು, ಮೊನ್ನೆ ದೇವಲೋಕದಲ್ಲಿ ಒಂದು ಕ್ರೈಸಿಸ್ ಬಂದ್ಬಿಡ್ತಂತೆ. ರಾಜನ್ ಪಿಳ್ಳೈ ಅಲ್ಲಿಗೆ ಹೋದ ಮೇಲೆ ದೇವೇಂದ್ರನ್ನ ಒಳಗೆ ಹಾಕ್ಕೊಂಡು, ಕೋಟ್ಯಾಂತರ ವರಹಗಳ ಡೀಲ್‌ಗೆ ಒಪ್ಸಿ, ಆ ಅಮೃತ ಕಲಶಾನ ದಾನವರ ಬ್ಯಾಂಕಿನಲ್ಲಿ ಅಡವಿಟ್ಟನಂತೆ. ವಿಷಯ ದೇವತೆಗಳಿಗೆ ತಿಳಿದು ಅವ್ರೆಲ್ಲಾ ಕಂಗೆಟ್ಟರಂತೆ, ಅಮೃತಾ ಇಲ್ದೇ ಒಂದು ದಿನಾನೂ ಇರುಕ್ಕೆ ಆಗುಲ್ಲಾ, ಈಗ ಕಲಶಾನೇ ಮಾಯ ! ಏನಪ್ಪಾ ಮಾಡೋದು ಅಂತ ಯೋಚಿಸಿ, ಕೊನೇಗೆ ಸಕಲ ವಿಘ್ನ ಪರಿಹಾರನಾದ ವಿಘ್ನೇಶ್ವರನಿಗೆ ಮೊರೆಹೊಕ್ಕರಂತೆ. ಗಣೇಶ ಎಪ್ಪಾದ್ರೂ ಭಕ್ತಜನ ಪರಿಪಾಲಕ, ನೀವೇನೂ ಯೋಚ್ನೆ ಮಾಡ್ಬೇಡಿ ಭೂ ಲೋಕದಲ್ಲಿ ಬೇಕಾದಷ್ಟು ಹಾಲಿದೆ. ಅಲ್ಲಿ ಅದನ್ನ ತಗೊಂಡು ಇಲ್ಲೀಗೆ ನೇರವಾಗಿ ಡಿಸ್ಪಾಚ್ ಮಾಡ್ತೀನಿ ಅಂದನಂತೆ. ಕಾಕ್ ಎಂಡ್ ಬುಲ್ ಸ್ಟೋರಿ ಅನ್ಬೇಡಿ, ನಿಮ್ಮನೇ ವಿಗ್ರಹಕ್ಕೆ ಹಾಲು ಕುಡಿಸಿ, ಕುಡಿಯುತ್ತೋ ಇಲ್ವೋ ನೀವೇ ನೋಡಿ.

ಮುಖ್ಯ ಅತಿಥಿ

ವಸುಮತಿ ಉಡುಪ.

ಹಿಂದೊಂದ ಕಾಲದ ಕೊನೆಯ ಬೆಂಚಿನ ಶಿಷ್ಯ
ಇಂದು ಹಳ್ಳಿ ಹೈಸ್ಕೂಲೊಂದರ ಉಪಾಧ್ಯಾಯ
ವಾರ್ಷಿಕೋತ್ಸವಕೆಂದು ಕರೆಯ ಬಂದವನು,
ಆಗ್ರಹಿಸಿ ಒಪ್ಪಿಗೆಗೆ ಕಾದು ನಿಂತಿಹನು ॥೧॥

ಸಾರ್ ನಿಮ್ಮ ಭಾಷಣ ಕೇಳಿ ಯುಗವಾಯ್ತು,
ಏನು ಗತ್ತು, ಏನು ವಿದ್ವತ್ತು, ಮಾತೆ ಮುತ್ತು
ಹೊಗಳಿಕೆಗೆ ಮರುಳಾಗದವರುಂಟೇ ಜಗದಿ
ಹೂಂಗುಟ್ಟಿದೆನು ಉಬ್ಬುತುಬ್ಬುತ್ತ ಮನದಿ ॥೨॥

ವಾರ್ಷಿಕೋತ್ಸವದ ದಿನ ರಿಕ್ಷಾದಲಿ ಬಂದ,
ಮನೆಯ ಮೆಟ್ಟಿಲಿಗೇ ತಾಗಿ ನಿಲ್ಲಿಸಿದ.
ಬಸ್ ಸ್ಟ್ಯಾಂಡಿನಲಿ ಎರಡು ಎಳನೀರು ಕುಡಿಸಿದ.
ತಾ ಸೇದದಿದ್ದರೂ ಸಿಗರೇಟು ಕೊಡಿಸಿದ. ॥೩॥

ಗುಂಪಿನಲಿ ನುಗ್ಗಿ ನನಗೆಂದು ಸೀಟು ಹಿಡಿದ,
ತಾನು ಕಂಬಿಯ ಹಿಡಿದು ನೇತಾಡಿದ.
ಹೈಸ್ಕೂಲಿನಲಿ ಕಾಫಿ, ಬಿಸ್ಕತ್ತುಗಳ ಉಪಹಾರ,
ವೇದಿಕೆಯ ಮೇಲೆ ಹೊಗಳಿಕೆ, ಹೂಹಾರ ॥೪॥

ಭಾಷಣದ ಬಿಗಿಯಲಿಕೆ ಸ್ಥಳವಲ್ಲ ಗೊತ್ತಿತ್ತು,
ಮನೋರಂಜನೆಗೆ ಜನ ಕಾದು ನಿಂತಿತ್ತು.
ಎಣಿಸಿ ನಾಲ್ಕೇನಾಲ್ಕು ಮಾತಾಡಿ ಮುಗಿಸಿದೆ,
'ಕಳಿಸು ನನ್ನನ್ನಿನ್ನು, ಹೊರಡುವೆನು' ಎಂದೆ॥೫॥


ಬಸ್ಸು ನಿಲ್ಲುವ ಜಾಗ ಮೈಲಿದೂರದಲಿತ್ತು.
ಕಳಿಸಬಂದನು ಶಿಷ್ಯ ಅವಸರವ ಹೊತ್ತು.
'ಇನ್ನೇನು ಮೋಹಿನಿಯು ಬಂದು ಬಿಡುವುದು. ಎಂದ.
ಒಂಟಿಯಾಗುಳಿಸೆನ್ನ ತಾ ಹೊರಟುಹೋದ. ॥೬॥


ಗಂಟೆಗಳು ಕಳೆದರೂ ಮೋಹಿನಿಯ ಸುಳಿವಿಲ್ಲ,
ವಾಚು, ಉಂಗುರ ಕೈಲಿ ಜಾಗ ಗೊತ್ತಿಲ್ಲ.
ತಲೆಯೊಡೆದು ಕೊಂದರೂ ಕೇಳುವವರಾರಿಲ್ಲ,
ಹಸಿವ ಹೊಟ್ಟೆಗೆ ಗುಟಕು ನೀರಿಗೂ ಗತಿಯಿಲ್ಲ ॥೭॥


ಕೊನೆಗೊಮ್ಮೆ ಮೋಹಿನಿಯು ಆಗಮನವಾಯ್ತು,
ಬಸ್ಸೇರಿ ಕೂತಾಗ ಸರಿ ರಾತ್ರಿ ಮೀರಿತ್ತು.
ಶಪಥಗೈದನು 'ಇನ್ನು ಹೊಗಳಿಕೆಗೆ ಮರುಳಾಗೆ'
ಇದು ಹೀಗೇ, ಇನ್ನೊಬ್ಬ ಬಂದು ಕರೆಯುವವರೆಗೆ... ॥೮॥

ಪರ್ಸನಲ್ ಸೆಕ್ರೆಟರಿ ಕೆಲಸಕ್ಕೆ ಇಂಟರ್ವ್ಯೂ ನಡೆಯುತ್ತಿತ್ತು. ಮೂವರು ತರುಣಿಯರು ತಮ್ಮ ಸರದಿಗೆ ಕಾಯುತ್ತಿದ್ದರು. ಮೊದಲ ತರುಣಿಯನ್ನು HRD ಮ್ಯಾನೇಜರ್ ಕೇಳಿದ "ಎರಡು ಮತ್ತು ಎರಡು ಸೇರಿದರೆ ಏನಾಗುತ್ತದೆ ?" ಆಕೆ "ನಾಲ್ಕು" ಅಂತ ಚಟಕ್ಕನೆ ಉತ್ತರಿಸಿದಳು. ಅದೇ ಪ್ರಶ್ನೆಗೆ ಎರಡನೇ ತರುಣಿ "ಇಪ್ಪತ್ತೆರಡು" ಅಂದಳು. ಮೂರನೆಯ ತರುಣಿ "ನಾಲ್ಕಾದರೂ ಆಗಬಹುದು ಅಥವಾ ಇಪ್ಪತೆರಡೂ ಆಗಬಹುದು" ಅಂದಳು. ಇಂಟರ್ವ್ಯೂ ಮುಗಿದ ಮೇಲೆ HRD ಮ್ಯಾನೇಜರ್, MD ಕಡೆ ತಿರುಗಿ "ನೋಡಿಸಾರ್. ಮೊದಲ್ನೇ ಹುಡುಗೀಗೆ ಇಮ್ಯಾಜಿನೇಷನ್ ಇಲ್ಲ, ಎರಡನೆಯವಳು ಹೊಸಹೆಜ್ಜೆ ಹಾಕಲು ಸಿದ್ಧ. ಮೂರನೆಯವಳು ಅನಿರೀಕ್ಷಿತ ಸಂಭವಗಳನ್ನೂ ಗುರುತಿಸಬಲ್ಲಳು ಯಾರನ್ನ ಆರಿಸ್ತೀರ ?" ಅಂತ ಕೇಳಿದ

M D "ಆ ತೆಳುನೀಲಿ ಚುಡೀದಾರ್ ಹುಡುಗೀನೆ ಸೆಲೆಕ್ಟ್ ಮಾಡ್ರಿ" ಅಂದ ನಂತೆ


ಕೋಟಿ ಕೋಟಿ ಗ್ರಾಹಕರ ಸಂತಸವೇ ನಮ್ಮ ಸ್ಫೂರ್ತಿ
ಕೆನರಾ ಬ್ಯಾಂಕ್
(ಭಾರತ ಸರ್ಕಾರದ ಉದ್ಯಮ)
ಪ್ರಧಾನ ಕಚೇರಿ, ಜೆ. ಸಿ. ರಸ್ತೆ, ಬೆಂಗಳೂರು 560 002





Printed by V.R. NATH for the Publisher M. SHIVAKUMAR, Published and owned by M. SHIVA KUMAR, 36. 6th Main Road, Malleswaram, Bangalore-560 003. Printed at IMPRESSIONS, 404. Sampige Road, Malleswaram, Bangalore-560 003. Editor : M. SHIVAKUMAR.